# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ –155 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಕೆಎ/ಎಸ್‌ಕೆ/ಸಿಟಿಎ–874/2024–2026 | ಚಿತ್ರದುರ್ಗ | ದಿನಾಂಕ: 07–01–2025 ಮಂಗಳವಾರ | ಪುಟ: 4 | ಬೆಲೆ : ರೂ.2–00
Volume - 02 Issue - 155 | RNI No: KARKAN/2023/88462 | KA/SK/CTA-874/2024-2026 | Chitradurga | Date: 07-01-2025 Tuesday | Page: 4 | Price: Rs. 2-00



ಒಳಪುಟದ ಸುದ್ದಿಗಳು
ದೌರ್ಜನ್ಯಕ್ಕೊಳಗಾದವರಿಗೆ ಧೈರ್ಯ ತುಂಬುವ ಕೆಲಸವಾಗಲಿ; ರಾಜೇಶ್ವರಿ ಹೆಗಡೆ 2
ಶೈಕ್ಷಣಿಕ ಪ್ರಗತಿಗೆ ಹೆಚ್ಚು ಆದ್ಯತೆ ನೀಡುವ ವಿದ್ಯಾಸಂಸ್ಥೆಗಳು ವಿಶ್ವಾಸ ಗಳಿಸುತ್ತವೆ 3
ಸಂಸ್ಥೆ ಗುಣಮಟ್ಟ ಶಿಕ್ಷಣ ನೀಡಬೇಕೆ ವಿನಃ ಹಣ ದೋಚುವ ಕೇಂದ್ರಗಳಾಗಬಾರದು 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### "ರಾಜ್ಯಮಟ್ಟದ ಟೆಕ್ವಾಂಡೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಜೀವನ್ "



» ಹೊಸದುರ್ಗ
ರಾಜ್ಯ ಮಟ್ಟದ ಟೆಕ್ವಾಂಡೋ ಸ್ಪರ್ಧೆಯಲ್ಲಿ ಹೊಸದುರ್ಗದ ಬಸವಪುರ ಕಾಂತರಾಜ್ ಚೈತ್ರ ದಂಪತಿಯ ಮಗ ಸಂದೀಪನಿ ಇಂಡಿಯನ್ ಇಂಟರ್ನ್ಯಾಷನಲ್ ಶಾಲೆಯ 5 ನೇ ತರಗತಿ ವಿದ್ಯಾರ್ಥಿಬಿ ಕೆ ಜೀವನ್ 11 ವರ್ಷದೊಳಗಿನ ಪಂದ್ಯದಲ್ಲಿ ಪ್ರಥಮ ಸ್ಥಾನ ಗೆಲ್ಲುವುದರ ಮೂಲಕ ಗೋಲ್ಡ್ ಮೆಡಲನ್ನು ಹಾಗೂ ಎಲ್ಲೊ ಬೆಲ್ಟ್ ತನ್ನದಾಗಿಸಿಕೊಂಡನು. ಶ್ರೀ ಸಾಯಿ ಗ್ರೂಪ್ ವತಿಯಿಂದ ನಗರದ ಗಣೇಶ ಸದನದಲ್ಲಿ ನಡೆದ ರಾಜ್ಯಮಟ್ಟದ ಟೆಕ್ವಾಂಡೋ ಸ್ಪರ್ಧೆಯಲ್ಲಿ ರಾಜ್ಯದ ಹೆಸರಾಂತ ಟೆಕ್ವಾಂಡೋ ರಾಜ್ಯಮಟ್ಟದ ಟೆಕ್ವಾಂಡೊ ಕೋಚ್ ರಜನಿಕಾಂತ್ ನೇತೃತ್ವದಲ್ಲಿ ಸಾಯಿ ಕಪ್ ಪಂದ್ಯಾವಳಿ ಯಶಸ್ವಿಯಾಗಿ ನರವೇರಿತು. ಪಂದ್ಯಾವಳಿಯಲ್ಲಿ ಸುಹಾನ ಭಾರತ ವೇದಿಕೆ ಅಧ್ಯಕ್ಷ ಇಸ್ಮಾಯಿಲ್ ಕೋಟ್ ರಜನಿಕಾಂತ್ ರಾಗಿ ಶಿವಮೂರ್ತಿ,ಅನಿತಾ ರಾಜೇಶ್ ಅಲ್ತಾಫ್ ಕೆಜಿ ಎನ್ ಮುನ್ನ ಹಾಗೂ ಮುಂತಾದವರಿದ್ದರು.

### ಕವಿ ನಾ.ಡಿಸೋಜರವರ ನಿಧನಕ್ಕೆ ಕಂಬನಿ ಮಿಡಿದ ಕನ್ನಡಾಭಿಮಾನಿಗಳು



» ಚಳ್ಳಕೆರೆ
ನಾಡಿನ ಹಿರಿಯ ಕವಿ, ಮಲೆನಾಡಿನ ಸಿರಿಯನ್ನು ತನ್ನ ಕವಿತೆ, ಕವನಗಳ ಮೂಲಕ ಸಾರ್ವಜನಿಕರಿಗೆ ಉಣಬಡಿಸಿದ ಕೀರ್ತಿ ನಾಡೋಜ ಡಿಸೋಜರವರದ್ದು. ಕುವೆಂಪುನಂತರ ಮಲೆನಾಡು ಭಾಗದಲ್ಲಿ ಗುರುತಿಸಿಕೊಂಡ ನಾ.ಡಿಸೋಜ ವಯೋಸಹಜ ಖಾಯಿಲೆಯಿಂದ ಮೃತರಾಗಿದ್ದು ಅವರ ಸಾಹಿತ್ಯಸೇವೆಯನ್ನು ನಾಡು ಎಂದೂ ಮರೆಯುವುದಿಲ್ಲವೆಂದು ಕನ್ನಡ ಸಾಂಸ್ಕೃತಿಕ ಸಂಸ್ಥೆ ಅಧ್ಯಕ್ಷ ಕೊರ್ಲಕುಂಟೆತಿಪ್ಪೇಸ್ವಾಮಿ ತಿಳಿಸಿದರು.
ಅವರು, ಕಾರ್ಯಾಲಯದಲ್ಲಿ ನಾಡೋಜ ಡಿಸೋಜರವರ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ನಾ.ಡಿಸೋಜರವರ ಸಾಹಿತ್ಯಸೇವೆಗೆ ಹಲವಾರು ಪ್ರಶಸ್ತಿಗಳು ಲಭ್ಯವಾಗಿವೆ. ಸರಳ ಜೀವನದ ಮೂಲಕವೇ ಗುಣಾತ್ಮಕ ಸಾಹಿತ್ಯವನ್ನು ನೀಡಿದ ಕೀರ್ತಿ ಅವರದ್ದು ಎಂದರು. ಕಾರ್ಯಕ್ರಮದಲ್ಲಿ ಸಿ.ಜಿ.ತಿಪ್ಪೇಸ್ವಾಮಿ, ಜಿ.ಆರ್.ರಂಗಸ್ವಾಮಿ, ಎಚ್.ಲಂಕೇಶ್, ಪಗಡಲಬಂಡೆ ನಾಗೇಂದ್ರಪ್ಪ, ಜಿ.ಎನ್.ಸುಭಾಷ್, ಪಿ.ಡಿ.ಮಂಜುನಾಥ, ಎನ್.ನರಸಿಂಹಮೂರ್ತಿ, ಬಿ.ಮೂರ್ತಿ, ಎಂ.ಎಚ್.ಸ್ವಾಮಿ, ಆರ್.ರವಿವರ್ಮ, ಎ.ಪ್ರಸನ್ನ, ಕೆ.ಎಚ್.ಶ್ರೀಕಾಂತ್ ಉಪಸ್ಥಿತರಿದ್ದರು.

### ಜ.10ರಂದು ನೇರ ನೇಮಕಾತಿ ಸಂದರ್ಶನ

» ಚಿತ್ರದುರ್ಗ
ಚಿತ್ರದುರ್ಗ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಇದೇ ಜನವರಿ 10ರಂದು ಬೆಳಿಗ್ಗೆ 10 ರಿಂದ 2 ರವರೆಗೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ನೇಮಕಾತಿ ಸಂದರ್ಶನ ನಡೆಯಲಿದೆ. ಈ ಮೇಳದಲ್ಲಿ ವಿವಿಧ ಖಾಸಗಿ ಕಂಪನಿಗಳು ತಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಲು ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಯಾವುದೇ ಪದವಿ ಹೊಂದಿರುವ 18 ರಿಂದ 30 ವರ್ಷದೊಳಗಿನ ಪುರುಷ ಅಥವಾ ಮಹಿಳೆ ಅಭ್ಯರ್ಥಿಗಳನ್ನು ನೇರವಾಗಿ ಆಯ್ಕೆ ಮಾಡಿಕೊಳ್ಳಲಿದ್ದು ಹೆಚ್ಚಿನ ಮಾಹಿತಿಗಾಗಿ ನಗರದ ಹಳೇ ವೈಶಾಲಿ ಗೇಟ್ ಹತ್ತಿರ, ಸ್ಟೇಡಿಯಂ ತಿರುವು, ಉದ್ಯೋಗ ವಿನಿಮಯ ಕೇಂದ್ರ ಕಚೇರಿ, ಚಿತ್ರದುರ್ಗ ದೂರವಾಣಿ ಸಂಖ್ಯೆ 7022459064, 9945587060, 8105619020 ಗೆ ಸಂಪರ್ಕಿಸಬಹುದು.

## ಮತದಾರರ ಅಂತಿಮ ಪಟ್ಟಿ ಪ್ರಕಟ, ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಮಾಹಿತಿ

# ಜಿಲ್ಲೆಯಲ್ಲಿ 14.29 ಲಕ್ಷ ಮತದಾರರು

» ಚಿತ್ರದುರ್ಗ
ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯ ಪೂರ್ಣಗೊಂಡಿದ್ದು, ಜಿಲ್ಲೆಯಲ್ಲಿ 14,29,555 ಮತದಾರರು ಇದ್ದು, ಪುರುಷ–7,09,048, ಮಹಿಳೆ–7,20,420 ಹಾಗೂ ಇತರೆ–87 ಮತದಾರರು ಇದ್ದಾರೆ ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ತಿಳಿಸಿದ್ದಾರೆ.

ಸೋಮವಾರ ಮತದಾರರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯಕ್ರಮದ ಅನ್ವಯ ವಿಧಾನಸಭಾ ಕ್ಷೇತ್ರವಾರು ಮತದಾರರ ಅಂತಿಮ ಪಟ್ಟಿಯನ್ನು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಅವರು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಪ್ರಚುರಪಡಿಸಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದ ಅನುಸಾರ ಪ್ರತಿ ವರ್ಷ ಅಕ್ಟೋಬರ್ ಮಾಹೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ವೇಳಾಪಟ್ಟಿ ಪ್ರಕಟಿಸಲಾಗುತ್ತದೆ. ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಒಟ್ಟು 1,661 ಮತಗಟ್ಟೆಗಳಿದ್ದು, ಕರಡು ಮತದಾರರ ಪಟ್ಟಿ ಪ್ರಕಟಣೆಯನ್ವಯ ಈ ಮೊದಲು ಜಿಲ್ಲೆಯಲ್ಲಿ 14,35,994 ಮತದಾರರಿದ್ದರು. ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ನಂತರ ಜಿಲ್ಲೆಯಲ್ಲಿ 14,29,555 ಮತದಾರರಿದ್ದಾರೆ ಎಂದು ತಿಳಿಸಿದರು.

ಮತದಾರರ ಪಟ್ಟಿ ಸಂಕ್ಷಿಪ್ತ ಪರಿಷ್ಕರಣೆ–2025ರ ಕಾರ್ಯಕ್ರಮದ ಅನ್ವಯ ಪ್ರಸಕ್ತ ಸಾಲಿನ ವರ್ಷದಲ್ಲಿ 13,758 ಮತದಾರರನ್ನು ಹೊಸದಾಗಿ ಸೇರ್ಪಡೆ ಮಾಡಲಾಗಿದೆ. ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವಾಗ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಮರಣ, ಡಬಲ್ ಎಂಟ್ರಿ ಸೇರಿದಂತೆ ಒಟ್ಟು 20,197 ಮತದಾರರನ್ನು ನಿಯಮಾನುಸಾರವಾಗಿ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಒಟ್ಟು




11,727 ಮತದಾರರ ಹೆಸರು, ಭಾವಚಿತ್ರ ಬದಲಾವಣೆ, ತಂದೆ, ಗಂಡನ ಹೆಸರು ಹಾಗೂ ವಿಳಾಸ ತಿದ್ದುಪಡಿ ಮಾಡಲಾಗಿದೆ ಎಂದು ಹೇಳಿದರು.

ವಿಧಾನಸಭಾ ಕ್ಷೇತ್ರವಾರು ಮತದಾರರ ಸಂಖ್ಯೆ : ಮತದಾರರ ಅಂತಿಮ ಪಟ್ಟಿಯನ್ವಯ ಜಿಲ್ಲೆಯಲ್ಲಿ ಒಟ್ಟು 14,29,555 ಮತದಾರರು ಇದ್ದು, ಪುರುಷ–7,09,048, ಮಹಿಳೆ–7,20,420 ಹಾಗೂ ಇತರೆ–87 ಮತದಾರರು ಇದ್ದಾರೆ. ವಿಧಾನಸಭಾ ಕ್ಷೇತ್ರವಾರು ಮತದಾರರ ಸಂಖ್ಯೆಯ ವಿವರ ಇಂತಿದೆ. ಮೊಳಕಾಲ್ಮೂರು : ಪುರುಷ–1,25,800, ಮಹಿಳೆ–1,25,575, ಇತರೆ–13, ಒಟ್ಟು 2,51,387 ಮತದಾರರಿದ್ದಾರೆ. ಚಳ್ಳಕೆರೆ : ಪುರುಷ–1,10,954, ಮಹಿಳೆ–1,13,139, ಇತರೆ–08, ಒಟ್ಟು 2,24,101. ಚಿತ್ರದುರ್ಗ: 1,31,022, ಮಹಿಳೆ–1,36,410, ಇತರೆ–39, ಒಟ್ಟು 2,67,471. ಹಿರಿಯೂರು: 1,22,266, ಮಹಿಳೆ–1,25,793, ಇತರೆ–16, ಒಟ್ಟು 2,48,075. ಹೊಸದುರ್ಗ: 1,00,596, ಮಹಿಳೆ–1,01,185, ಇತರೆ–01, ಒಟ್ಟು 2,01,782. ಹಾಗೂ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಪುರುಷ– 1,18,410, ಮಹಿಳೆ–1,18,319, ಇತರೆ–10, ಒಟ್ಟು 2,36,739 ಮತದಾರರಿದ್ದಾರೆ.

29,240 ಯುವ ಮತದಾರರು: ಕರಡು ಮತದಾರರ ಪಟ್ಟಿಯಲ್ಲಿ 18 ರಿಂದ 19 ವರ್ಷದ 22,667 ಯುವ ಮತದಾರರಿದ್ದು, ಅಂತಿಮ ಪಟ್ಟಿಯನ್ವಯ ಈ ಸಂಖ್ಯೆ 29,240ಕ್ಕೆ ಏರಿಕೆಯಾಗಿದೆ. 369 ಸೇವಾ ಮತದಾರರಿದ್ದಾರೆ ಎಂದು ತಿಳಿಸಿದರು. ಭಾರತ ಚುನಾವಣಾ ಆಯೋಗವು ಪ್ರಜಾಪ್ರತಿನಿಧಿ ಕಾಯ್ದೆ 1950ರ ಸೆಕ್ಷನ್ 14ಕ್ಕೆ ತಿದ್ದುಪಡಿ ಮಾಡಿ ಮತದಾರರ ನೋಂದಣಿ ನಿಯಮಗಳು 1960ಕ್ಕೆ ಅನುಗುಣವಾಗಿ ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರ್ಪಡೆ ಮಾಡಲು 4 ಅರ್ಹತಾ ದಿನಾಂಕಗಳನ್ನು ನೀಡಿ, ಅವಕಾಶ ಕಲ್ಪಿಸಿದ್ದು, ಜನವರಿ 1, ಏಪ್ರಿಲ್ 1, ಜುಲೈ 1, ಅಕ್ಟೋಬರ್ 1ಕ್ಕೆ 18 ವರ್ಷ ಪೂರ್ಣಗೊಳ್ಳುವವರು ಹಾಗೂ ಅರ್ಹ ಮತದಾರರು ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಲ್ಲದವರು ಹಾಗೂ ಹೆಸರು ಕೈಬಿಟ್ಟುಹೋಗಿರುವವರು ಹಾಗೂ ಮತದಾರರ ಪಟ್ಟಿಯಲ್ಲಿ ಮಾಹಿತಿ ತಿದ್ದುಪಡಿ ಮಾಡಿಸಬೇಕಾದಲ್ಲಿ ಮತ್ತು ಅದೇ ವಿಧಾನ ಸಭಾ ಕ್ಷೇತ್ರದ ಬೇರೆ ಮತಗಟ್ಟೆಗೆ ವರ್ಗಾಯಿಸಬೇಕಾದಲ್ಲಿ ನಿಗಧಿಪಡಿಸಿರುವ ನಮೂನೆಗಳಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ತಮ್ಮ ವ್ಯಾಪ್ತಿಯ ಮತದಾನ ಕೇಂದ್ರದಲ್ಲಿ, ತಾಲ್ಲೂಕು ಕಚೇರಿಯಲ್ಲಿ, ಉಪವಿಭಾಗಾಧಿಕಾರಿಗಳ ಕಾರ್ಯಾಲಯದಲ್ಲಿ ನೀಡಿ ಸ್ವೀಕೃತಿ ಪಡೆಯಬಹುದಾಗಿದೆ. www.ceokarntaka.nic.in, https://chitradurga.nic.in ವೆಬ್‌ಸೈಟ್‌ನಲ್ಲಿಯೂ ಸಹ ಪರಿಶೀಲಿಸಿಕೊಂಡು ಪಟ್ಟಿಯಲ್ಲಿ ಹೆಸರು ಇಲ್ಲದಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿಗಳನ್ನು ಗಿಲೂಂ ೦ಠಿಠಿ ನಲ್ಲಿಯೂ ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ರಾಜಕೀಯ ಪಕ್ಷದವರು ಪ್ರತಿಯೊಂದು ಮತಗಟ್ಟೆಗೆ ಮತಗಟ್ಟೆ ಮಟ್ಟದ ಏಜೆಂಟರನ್ನು ನೇಮಕ ಮಾಡಿ, ಏಜೆಂಟರು ತಮ್ಮ ವ್ಯಾಪ್ತಿಯ ಮತದಾರರ ಪಟ್ಟಿಗೆ ಅರ್ಹರನ್ನು ಸೇರಿಸುವ, ಬಿಡತಕ್ಕ, ತಿದ್ದುಪಡಿ, ಮಾಡಲು ಬಿಎಲ್‌ಒಗಳಿಗೆ ಸಹಾಯ ಮಾಡುವಂತೆ ಕೋರಿದರು.

ಮತದಾರರ ಭಾವಚಿತ್ರವಿರುವ ಗುರತಿನ ಚೀಟಿಯು ನೇರವಾಗಿ ಆಯಾ ಮತದಾರರ ವಿಳಾಸಕ್ಕೆ ಅಂಚೆ ಮೂಲಕ ಉಚಿತವಾಗಿ ತಲುಪಿಸಲಾಗುವುದು. ಎಪಿಕ್ ಕಾರ್ಡ್ ಕಳೆದುಹೋದಲ್ಲಿ ಅಥವಾ ಬದಲಿ ಕಾರ್ಡ್ ಪಡೆಯಲು ಸಂಬಂಧಪಟ್ಟ ಬಿಎಲ್‌ಒ, ತಹಶೀಲ್ದಾರ್ ಅಥವಾ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿಯೇ ಅರ್ಜಿಯನ್ನು ಸಲ್ಲಿಸಿ, ಉಚಿತವಾಗಿಕಾರ್ಡ್‌ಪಡೆಯಬಹುದಾಗಿದೆ. ಮತದಾರರ ಪಟ್ಟಿಯ ಬಗ್ಗೆ ಯಾವುದೇ ಸಂದೇಹಗಳಿದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಜಿಲ್ಲಾ ಸಂಪರ್ಕ ಕೇಂದ್ರದ ಸಹಾಯವಾಣಿ ಸಂಖ್ಯೆ–ಟೋಲ್ ಫ್ರೀ ಸಂಖ್ಯೆ 1950ಕ್ಕೆ ಕರೆ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಹೇಳಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ಜಿಲ್ಲಾ ಜೆಡಿಎಸ್ ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಗೋಪಾಲಸ್ವಾಮಿ ನಾಯಕ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ.ಎನ್.ಮೈಲಾರಪ್ಪ, ಸಿಪಿಐ(ಎಂ)ಡಿಒಸಿ ಸಿ.ಕೆ.ಗೌಸ್‌ಪೀರ್, ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕಿರಣ್ ಸೇರಿದಂತೆ ಚುನಾವಣಾ ಶಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

## ಪ್ರಮುಖ ಸುದ್ದಿ

# ಭದ್ರಾ ಅನುಷ್ಠಾನದಲ್ಲಿ ಕೇಂದ್ರ, ರಾಜ್ಯ ಸರ್ಕಾರ ಲೋಪ ಜಿಲ್ಲೆ ಜನತೆಯನ್ನು ಕಂಗೆಡಿಸಿದೆ : ಚಳ್ಳಕೆರೆ ಬಸವರಾಜು

» ಚಳ್ಳಕೆರೆ
ಭದ್ರಾ ಮೇಲ್ದಂಡೆ ಕಾಮಗಾರಿ ಈ ಭಾಗದ ರೈತಾಪಿ ವರ್ಗದ ಜೀವನಾಡಿ ಆಗಿದೆ ಎಂದು ಶಾಸಕ, ಸಣ್ಣ ಕೈಗಾರಿಕೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ನಗರದ ಸರ್ಕಾರಿ ನೌಕರರ ಭವನದಲ್ಲಿ ಭಾನುವಾರ ಕರ್ನಾಟಕ ಮಾಧ್ಯಮ ಮಹಾಒಕ್ಕೂಟ ಹಮ್ಮಿಕೊಂಡಿದ್ದ ಭದ್ರಾ ಮೇಲ್ದಂಡೆ ಯೋಜನೆ ವಿಳಂಬ ಕುರಿತು ವಿಚಾರ ಸಂಕಿರಣ ಮತ್ತು 2025 ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

1999ರಲ್ಲಿ ಅಂದಿನ ಮುಖ್ಯಮಂತ್ರಿ ಕೃಷ್ಣರವರು 2500 ಕೋಟಿ ವೆಚ್ಚದಲ್ಲಿ ಸುಮಾರು ನಾಲ್ಕು ಜಿಲ್ಲೆಗಳಿಗೆ ಭದ್ರಾ ನೀರನ್ನು ಒದಗಿಸುವ ಯೋಜನೆಗೆ ಚಾಲನೆ ನೀಡಿದರು. ನಂತರ ಕಾಮಗಾರಿ ಅನುಷ್ಠಾನಗೊಳ್ಳುವ ಮೂಲಕ ಭದ್ರಾ ಮೇಲ್ದಂಡೆ ಕಾಮಗಾರಿ ಆರಂಭಗೊಂಡು ಸುಮಾರು 2024 ವರೆಗೂ ಕಾಮಗಾರಿ ನಡೆಯುತ್ತಿದೆ. ಮುಂದಿನ ದಿನಗಳ ತಾಲೂಕಿನ 51 ಕೆರೆಗಳಿಗೆ ಭದ್ರಾ ಮೇಲ್ದಂಡೆ ನೀರು ತುಂಬಿಸುವ ಮೂಲಕ ಈ ಭಾಗದ ಜಮೀನುಗಳಿಗೆ ಹಾಗೂ ಕುಡಿಯುವ ನೀರು ಒದಗಿಸುವ ಕಾರ್ಯ ಮಾಡಲಾಗುವುದು ಎಂದರು.

2022–23ನೇ ಸಾಲಿನ ಕೇಂದ್ರ ಸರ್ಕಾರ ಬಜೆಟ್ ನಲ್ಲಿ ಘೋಷಿಸಿದಂತೆ 5300 ಕೋಟಿ ಹಾಗೂ ರಾಷ್ಟ್ರೀಯ ಯೋಜನೆಗೆ ಭದ್ರಾ ಮೇಲ್ದಂಡೆಯನ್ನು ಸೇರಿಸುವ ಘೋಷಣೆ ಮಾಡಿತ್ತು. ಕೇಂದ್ರದ ಹಣ ಬಿಡುಗಡೆಯಾಗಿದ್ದಲ್ಲಿ




ಕಾಮಗಾರಿ ಪೂರ್ಣಗೊಳ್ಳುತ್ತಿತ್ತು. ಆದರೆ, ರಾಷ್ಟ್ರೀಯ ಯೋಜನೆಗೆ ಸೇರ್ಪಡೆಯ ನಂತರ ಕೇಂದ್ರ ಸರ್ಕಾರ ಶೇಕಡ 60ರಷ್ಟು ಹಣವನ್ನು ಕಾಮಗಾರಿಗೆ ನೀಡಬೇಕಿತ್ತು, ಇದ್ಯಾವುದೂ ಕೂಡ ನಡೆಯದ ಕಾರಣ ಭದ್ರಾ ಮೇಲ್ದಂಡೆ ಯೋಜನೆ ಆಮೆ ಗತಿಯಲ್ಲಿ ಸಾಗುತ್ತಿದೆ ಎಂದು ತಿಳಿಸಿದರು.

2020ರಲ್ಲಿ ರಾಜ್ಯ ಸರ್ಕಾರ 22 ಸಾವಿರ ಕೋಟಿ ವೆಚ್ಚದಲ್ಲಿ ಚಿತ್ರದುರ್ಗ, ತುಮಕೂರು,ದಾವಣಗೆರೆ,ಚಿಕ್ಕಮಗಳೂರು ಜಿಲ್ಲೆಗಳ ಸುಮಾರು 367 ಕೆರೆ ತುಂಬಿಸುವ ಕಾರ್ಯಕ್ಕೆ ಮುಂದಾಯಿತು. ಇದರಿಂದ 2.25 ಲಕ್ಷ ಹೆಕ್ಟೇರ್ ನೀರಾವರಿ ಯೋಜನೆಗೆ ಸೌಲಭ್ಯ ದೊರೆಯಲಿದೆ ತಾಲೂಕಿನ ಸುಮಾರು 13 ಸಾವಿರ ಹೆಕ್ಟರ್ ಪ್ರದೇಶ ನೀರಾವರಿ ಪ್ರದೇಶ ಆಗಲಿದೆ. ಈಗಾಗಲೇ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ತಾಲೂಕಿನ ಹಲವಾರು ಕೆರೆಗಳನ್ನು ತುಂಬಿಸುವ ಯೋಜನೆಗೆ ರಾಜ್ಯ ಸರ್ಕಾರ ಮುಂದಾಗಿದ್ದು ಇದಕ್ಕೆ ಕೇಂದ್ರ ಸರ್ಕಾರದ ನೆರವು ಸಹ ಅಗತ್ಯವಾಗಿದೆ ಎಂದರು.

ಹಿರಿಯ ಪತ್ರಕರ್ತ ಚಳ್ಳಕೆರೆ ಬಸವರಾಜು ಭದ್ರಾ ಮೇಲ್ದಂಡೆ ಯೋಜನೆ ವಿಳಂಬ ಕುರಿತು ಉಪನ್ಯಾಸ ನೀಡಿ, ಸುಮಾರು ನಾಲ್ಕು ದಶಕಗಳ ಹೋರಾಟದ ಫಲವಾಗಿ 2025 ವರ್ಷದಲ್ಲಿ ಭದ್ರಾ ನೀರು ಕೆರೆಗಳನ್ನು ಸೇರುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿದ್ದು, 1990–99 ನೇ ಸಾಲಿನಲ್ಲಿ ಪತ್ರಕರ್ತರ ವೇದಿಕೆ ಮೂಲಕ ಭದ್ರಾ ಮೇಲ್ದಂಡೆ ಕಾಮಗಾರಿ ನಡೆಸಬೇಕು ಎಂದು ಹೋರಾಟಕ್ಕೆ ಮುನ್ನುಡಿ ಬರೆದಿದ್ದೆವು ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ರಾಷ್ಟ್ರೀಯ ಯೋಜನೆ ಮೂಲಕ ಅಭಿವೃದ್ಧಿಪಡಿಸಿದ್ದಲ್ಲಿ ಬರಪೀಡಿತ ಪ್ರದೇಶ ನೀರಾವರಿ ಪ್ರದೇಶವಾಗಿ ಪರಿವರ್ತನೆ ಗೊಳ್ಳುತ್ತಿತ್ತು. ಆದರೆ, ಕೆಲ ರಾಜಕೀಯ ವ್ಯಕ್ತಿಗಳ ಇಚ್ಛಾಶಕ್ತಿಯ ಕೊರತೆಯಿಂದ ಇಂದಿಗೂ ಸಹ ಭದ್ರಾ ಮೇಲ್ದಂಡೆ ಕಾಮಗಾರಿ ಆಮೆ ಗತಿಯಲ್ಲಿ ನಡೆಯುತ್ತಿದೆ. ಈ ಯೋಜನೆಯಿಂದ ಸಾವಿರಾರು ಎಕರೆ ಪ್ರದೇಶದ ನೀರಾವರಿಗೆ ಸಹಕಾರವಾಗಲಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡುವ ಮೂಲಕ ಯೋಜನೆಗೆ ಮತ್ತಷ್ಟು ವೇಗ ನೀಡಬೇಕಾಗಿದೆ. ಪ್ರಸ್ತುತ ಭದ್ರಾ ಮೇಲ್ದಂಡೆ ಯೋಜನೆ ಮಳೆಗಾಲದಲ್ಲಿ ಮಾತ್ರ ಕೆರೆಗಳಿಗೆ ನೀರು ಹರಿಸುವ ಯೋಜನೆಯಾಗಿದ್ದು ಇದರಿಂದ ಬರಪೀಡಿತ ಪ್ರದೇಶವಾದ ಚಿತ್ರದುರ್ಗಕ್ಕೆ ಯಾವುದೇ ಅನುಕೂಲ ಆಗುವ ಮುನ್ಸೂಚನೆಗಳು ಇಲ್ಲ ಎಂದರು.

ಬರಗಾಲ ಪ್ರದೇಶವನ್ನು ನಿಭಾಯಿಸಲು ಜಿಲ್ಲೆಯ ಯಾವುದೇ ಕೆರೆಗಳು ಸಜ್ಜಾಗಿಲ್ಲ ಅತಿ ಮುಖ್ಯವಾಗಿ ಭದ್ರಾ ನೀರು ತುಂಬುವ ಎಲ್ಲಾ ಕೆರೆಗಳು ಜಾಲಿಕಳ್ಳಿಗಳಿಂದ ಆವೃತ್ತವಾಗಿದ್ದು ಅವುಗಳನ್ನು ಅಚ್ಚುಕಟ್ಟು ಮಾಡುವ ಕೆಲಸ ಅತಿ ಶೀಘ್ರದಲ್ಲೇ ನಡೆಯಬೇಕಿದೆ ಎಂದು ಆಗ್ರಹಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಶಿವಕುಮಾರ್, ಕರ್ನಾಟಕ ಮಾಧ್ಯಮ ಮಹಾಒಕ್ಕೂಟ ಕೇವಲ ಪತ್ರಿಕಾಕ್ಷೇತ್ರವಲ್ಲದೆ, ಸಾಮಾಜಿಕ ಹೋರಾಟಗಳ ಮೂಲಕವೂ ಜನರಿಗೆ ನ್ಯಾಯ ದೊರಕಿಸುವ ಕೊಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ನಮ್ಮ ಒಕ್ಕೂಟ ಸಂಪೂರ್ಣ ಬೆಂಬಲ ನೀಡಲಿದೆ. ಪತ್ರಕರ್ತರೂ ಸೇರಿದಂತೆ ನಾಡಿನ ಎಲ್ಲಾ ವರ್ಗದ ಬಡ ಜನರ ಕಲ್ಯಾಣಕ್ಕಾಗಿ ಸರ್ಕಾರ ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದರು.ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಟಿ.ವೀರೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಡಿ.ಈಶ್ವರಪ್ಪ, ಜಿಲ್ಲಾಧ್ಯಕ್ಷ ಕರುನಾಡುಜಿಯಾವುಲ್ಲಾ, ಸಂಘಟನಾ ಕಾರ್ಯದರ್ಶಿ ಮೈಲನಹಳ್ಳಿ ತಿಪ್ಪೇಸ್ವಾಮಿ, ತಾಲ್ಲೂಕು ಅಧ್ಯಕ್ಷ ಪಿ.ಗಂಗಾಧರ, ಕಾರ್ಯದರ್ಶಿ ಡಿ.ನಿಂಗಪ್ಪ, ಹೊನ್ನೂರುಮಾರಣ್ಣ, ಬಷೀರ್‌ಹಯಾತ್, ನಾವೆಲ್ಲಾಮಹೇಶ್, ಎಚ್.ಲಕ್ಷ್ಮಣ್, ಉಮೇಶ್‌ಚಂದ್ರಬ್ಯಾನರ್ಜಿ, ಆರ್.ಎ.ದ'ಂ'ಾ'ನ'ಂದ', ಕಿವುಡಮೂಗ ಸಂಘದ ನಿರ್ಮಲ, ವಿ.ಎಸ್ .ವಿಷ್ಣುಮೂರ್ತಿರಾವ್, ಎಸ್.ಬಿ.ತಿಪ್ಪೇಸ್ವಾಮಿ, ನಗರಸಭಾ ಸದಸ್ಯರಾದ ಎಂ.ಜೆ.ರಾಘವೇಂದ್ರ, ಕೆ.ವೀರಭದ್ರ, ಎಂ.ಎನ್.ಮೃತ್ಯುಂಜಯ ಮುಂತಾದವರು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಹಿರಿಯ ನಾಗರೀಕರ ಆರೋಗ್ಯದ ಬಗ್ಗೆ ಸರ್ಕಾರ ವಿಶೇಷ ಗಮನ



» **ಚಳ್ಳಕೆರೆ**

ಪ್ರತಿಯೊಬ್ಬ ವ್ಯಕ್ತಿಯೂ ಕಣ್ಣಿನ ಆರೋಗ್ಯದ ಬಗ್ಗೆ ಹೆಚ್ಚು ಒತ್ತುನೀಡಬೇಕಾಗುತ್ತದೆ. ನಮ್ಮೆಲ್ಲರಿಗೂ ಪ್ರಪಂಚದಲ್ಲಿ ನಡೆಯುವ ವಿದ್ಯಾಮಾನಗಳನ್ನು ಕಣ್ತುಂಬಿಕೊಳ್ಳಲು ನಮ್ಮ ಕಣ್ಣುಗಳನ್ನು ಸುರಕ್ಷತೆಯಿಂದಕಾಪಾಡಿಕೊಳ್ಳಬೇಕಿದೆ.ಕಣ್ಣುದೇಹದ ಅತಿಮುಖ್ಯಅಂಗವಾಗಿದೆ. ದೃಷ್ಠಿಯಿಂದಲೇ ಸೃಷ್ಠಿ ಎಂಬುವುದನ್ನು ನಾವೆಲ್ಲರೂ ಅರಿಯಬೇಕೆಂದು ಜಿಲ್ಲಾ ಅಂದತ್ವ ನಿವಾರಣಧಿಕಾರಿ ಡಾ.ನಾಗರಾಜು ತಿಳಿಸಿದರು. ಅವರು, ನಗರದ ಸರ್ಕಾರಿ ನೌಕರರ ಭವನದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಜಿಲ್ಲಾ ಅಂದತ್ವನಿಯಂತ್ರಣ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಹಿರಿಯನಾಗರೀಕರಿಗೆ ಉಚಿತ ನೇತ್ರದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸರ್ಕಾರ ಹಿರಿಯನಾಗರೀಕರಿಗಾಗಿ ಉಚಿತ ನೇತ್ರತಪಾಸಣಾ ಶಿಬಿರವನ್ನು ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಆಯೋಜಿಸಿದ್ದು, ಹಿರಿಯ ನಾಗರೀಕರು ಇದರ ಪ್ರಯೋಜನವನ್ನು ಪಡೆಯುವಂತೆ ಮನವಿ ಮಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಅಂಗವಿಲಕ ಕಲ್ಯಾಣಾಧಿಕಾರಿ ಜೆ.ವೈಶಾಲಿ, ಸರ್ಕಾರ ಹಿರಿಯ ನಾಗರೀಕರ ಉಚಿತ ನೇತ್ರತಪಾಸಣಾ ಶಿಬಿರದ ಮೂಲಕ ಅವರ ಕಣ್ಣುಗಳಿಗೆ ಆಗುವ ತೊಂದರೆಯನ್ನು ನಿಯಂತ್ರಿಸಲು ಈ ಯೋಜನೆ ರೂಪಿಸಿದೆ. 2024–25ನೇ ಸಾಲಿನ ಸರ್ಕಾರದ ನಿಯಮಗಳ ಪ್ರಕಾರ ಆರು ತಾಲ್ಲೂಕು ಕೇಂದ್ರಗಳಲ್ಲಿ ಈ ಕಾರ್ಯಕ್ರಮ ಆಯೋಜಿಸಿದೆ. ವಿಕಲಚೇತನ ಇಲಾಖೆಯೂ ಸೇರಿದಂತೆ ಎಲ್ಲಾ ಇಲಾಖೆ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಿದೆ. ಸರ್ಕಾರ ಈ ಯೋಜನೆಯ ಅನುಷ್ಠಾನದಿಂದ ಹಿರಿಯ ನಾಗರೀಕರ ಆರೋಗ್ಯವನ್ನುಸಂರಕ್ಷಿಸುವಲ್ಲಿಯಶಸ್ವಿಹೆಜ್ಜೆಇಟ್ಟಿದೆ. ಈ ಕಾರ್ಯಕ್ರಮ ನಿರಂತರವಾಗಿ ನಡೆಯಲಿದ್ದು, ಹಿರಿಯ ನಾಗರೀಕರು ಇಂತಹ ಉಚಿತ ನೇತ್ರದಾನ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಕಣ್ಣಿನ ದೋಷಗಳನ್ನು ಸರಿಪಡಿಸಿಕೊಳ್ಳುವಂತೆ ಮನವಿ ಮಾಡಿದರು. ಜ.3ರಿಂದ10ರ ತನಕ ಈ ಕಾರ್ಯಕ್ರಮ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಡೆಯಲಿದ್ದು, ಎರಡು ಕಣ್ಣಿನ ಪೊರೆಗಳ ಚಿಕಿತ್ಸೆಗೆ ಸರ್ಕಾರ ನೆರವು ನೀಡಲಿದೆ ಎಂದರು. ಕಾರ್ಯಕ್ರಮದಲ್ಲಿ ನೇತ್ರತಜ್ಞರಾದ ಡಾ.ಶಿಲ್ಪ, ಪಾಂಚಜನ್ಯ, ಆಶಾ, ನವೀನ್‌ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

### ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಅನಾಮಧೇಯ ಬಿಕ್ಷುಕನ ಶವ ಪತ್ತೆ

» **ಚಳ್ಳಕೆರೆ**

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದ ಅರಮನೆ ಹೋಟೆಲ್ ಮುಂಭಾಗದಲ್ಲಿ ಸುಮಾರು 65ರಿಂದ70 ವರ್ಷ ವಯಸ್ಸುಳ್ಳ ಬಿಕ್ಷುಕನ ಶವ ದೊರಕಿದ್ದು, ನಿಲ್ದಾಣದ ಅಧಿಕಾರಿ ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತಾರೆ. ಮೃತ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ, ಸುಮಾರು 15ದಿನಗಳಿಂದ ಬಸ್ಟಾಂಡ್ ಆವರಣದಲ್ಲಿ ಬಿಕ್ಷೆಬೇಡಿಕೊಂಡಿದ್ದು, ಶನಿವಾರ ರಾತ್ರಿ, ಭಾನುವಾರ ಬೆಳಗಿನ ಜಾವದಲ್ಲಿಹೋಟೆಲ್ ಮುಂಭಾಗದಲ್ಲಿ ಮಲಗಿದ್ದವನು ಮೃತಪಟ್ಟಿರುತ್ತಾನೆ. ಪಿಎಸ್‌ಐ ಜೆ.ಪಿ.ಶಿವರಾಜ್ ಯುಡಿಆರ್‌ಪ್ರಕರಣ ದಾಖಲಿಸಿದ್ಧಾರೆ.

### ಜನವರಿ 27 ರಂದು ರೆಡ್‌ಕ್ರಾಸ್ ಸಂಸ್ಥೆ ವಾರ್ಷಿಕ ಸಾಮಾನ್ಯ ಸಭೆ

» **ದಾವಣಗೆರೆ**

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆಯ 2021–22, 22–23 ಹಾಗೂ 2023–24ನೇ ಸಾಲಿನ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ಇವರ ಅಧ್ಯಕ್ಷತೆಯಲ್ಲಿ ಜನವರಿ 27 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಇಂಡಿಯಾನ್ ಮೆಡಿಕಲ್ ಅಸೋಷಿಯೇಷನ್ ಐಎಂಎ ಸಭಾಂಗಣ, ಎಂ.ಸಿ.ಸಿ ಬಿ. ಬ್ಲಾಕ್, ದಾವಣಗೆರೆ ಇಲ್ಲಿ ಏರ್ಪಡಿಸಲಾಗಿದೆ ಎಂದು ಸಭಾಪತಿ ಡಾ.ಎ.ಎಂ ಶಿವಕುಮಾರ ಹಾಗೂ ಪ್ರಧಾನ ಕಾರ್ಯದರ್ಶಿ ಆನಂದ್ ಜ್ಯೋತಿ ತಿಳಿಸಿದ್ದಾರೆ.

### ಅವಧಿ ವಿಸ್ತರಣೆ

» **ದಾವಣಗೆರೆ**

ಪ್ರಸಕ್ತ ಸಾಲಿನ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದ್ದ ಅರ್ಜಿ ಸಲ್ಲಿಸುವ ಅವಧಿಯನ್ನು ಜ.15 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಗಾಯಿತ್ರಿ ತಿಳಿಸಿದ್ದಾರೆ.

### ಕ್ಷಯರೋಗ ನಿರ್ಮೂಲನೆ ಕುರಿತು 100 ದಿನಗಳ ಪ್ರಚಾರ ಅಭಿಯಾನ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸೂಚನೆ

# ಕ್ಷಯ ಮರಣ ಪ್ರಮಾಣ ಇಳಿಕೆಗೆ ಕ್ರಮ ವಹಿಸಿ

» **ಚಿತ್ರದುರ್ಗ**

ಕ್ಷಯರೋಗಿಗಳಿಗೆ ತ್ವರಿತ ಮತ್ತು ಸೂಕ್ತ ಚಿಕಿತ್ಸೆ ನೀಡಿ, ಮರಣ ಪ್ರಮಾಣ ಕಡಿಮೆಗೊಳಿಸಲು ಅಗತ್ಯ ಕ್ರಮವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಕ್ಷಯರೋಗ ನಿರ್ಮೂಲನೆ ಅಭಿಯಾನ 100 ದಿನಗಳ ತೀವ್ರ ಪ್ರಚಾರ ಕಾರ್ಯಕ್ರಮದ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕ್ಷಯರೋಗವನ್ನು ವ್ಯವಸ್ಥಿತವಾಗಿ ನಿರ್ಮೂಲನೆ ಮಾಡಬೇಕು. ಕ್ಷಯರೋಗದಿಂದ ಒಬ್ಬ ರೋಗಿಯು ಕೂಡ ಸಾವನ್ನಪ್ಪಬಾರದು. ಈ ನಿಟ್ಟಿನಲ್ಲಿ ಕ್ಷಯರೋಗದ ಅಪಾಯ ಇರುವವರನ್ನು ಹೆಚ್ಚಿನ ಜಾಗರೂಕತೆಯಿಂದ ಆರೈಕೆ ಮಾಡಬೇಕು, ಅವರಿಗೆ ನಿರಂತರ ಚಿಕಿತ್ಸೆ ಹಾಗೂ ಔಷಧಿ ವಿತರಣೆ ಮೂಲಕ ಗುಣಮುಖರಾಗಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.ಕ್ಷಯ ಸರ್ವೆ ವ್ಯವಸ್ಥಿತವಾಗಿರಲಿ: ಕ್ಷಯರೋಗ ನಿರ್ಮೂಲನೆ ಅಂಗವಾಗಿ 100 ದಿನಗಳ ತೀವ್ರ ಪ್ರಚಾರ ಆಂದೋಲನದ ಅಂಗವಾಗಿ ಆಶಾ ಕಾರ್ಯಕರ್ತೆಯರು ಕಡ್ಡಾಯವಾಗಿ ಮನೆ ಮನೆ ಭೇಟಿ ನೀಡಿ, ಕ್ಷಯ ರೋಗದ ಬಗ್ಗೆ ಜಾಗೃತಿ ಮೂಡಿಸಬೇಕು. ಶಾಲಾ ಮಕ್ಕಳಲ್ಲಿಯೂ ಸಹ ಕ್ಷಯರೋಗ ಲಕ್ಷಣಗಳ ಕುರಿತು ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಕ್ಷಯ ರೋಗ ನಿಯಂತ್ರಣದಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು, ಸಾರ್ವಜನಿಕರು ಹೆಚ್ಚಿನ ಕಾಳಜಿ ವಹಿಸಿ, ಕ್ಷಯರೋಗ ನಿರ್ಮೂಲನೆಗೆ ಅಗತ್ಯ ಸಹಕಾರ ನೀಡಬೇಕು. ಕ್ಷಯರೋಗಿಳಿಗೆ ಪೌಷ್ಠಿಕಾಂಶಯುಕ್ತ ಆಹಾರ ಅತ್ಯಗತ್ಯವಾಗಿದೆ. ರೋಗ ಗುಣಮುಖಕ್ಕೆ ಚಿಕಿತ್ಸೆಯಷ್ಟೇ,ಪೌಷ್ಠಿಕಆಹಾರಸೇವನೆಯೂ ಮುಖ್ಯ. “ನಿಕ್ಷಯ್ ಮಿತ್ರ” ಕುರಿತು ಹೆಚ್ಚಿನ ಪ್ರಚಾರ ನೀಡಿ, ದಾನಿಗಳಿಂದ, ಸಂಘ ಸಂಸ್ಥೆಗಳಿಂದ ಪೌಷ್ಠಿಕಾಂಶಯುಕ್ತ ಆಹಾರ ಕಿಟ್‌ಗಳ ವಿತರಣೆಗೆ ಕ್ರಮ ವಹಿಸಿ ಎಂದು ಹೇಳಿದರು.



### ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸೂಚನೆ

## ತಂಬಾಕು ಕಾರ್ಯಾಚರಣೆ ಪರಿಣಾಮಕಾರಿಯಾಗಿರಲಿ

» **ಚಿತ್ರದುರ್ಗ**

ಜಿಲ್ಲೆಯಲ್ಲಿ ತಂಬಾಕು ನಿಯಂತ್ರಣ ಕಾರ್ಯಕ್ರಮ ಪರಿಣಾಮಕಾರಿಯನ್ನಾಗಿಸಲು ಹೆಚ್ಚು ಹೆಚ್ಚು ದಾಳಿ ಮಾಡಬೇಕು. ತಂಬಾಕು ನಿಯಂತ್ರಣ ಕಾರ್ಯಾಚರಣೆ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ತ್ರೈಮಾಸಿಕ ಸಮನ್ವಯ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂಬಾಕು ನಿಯಂತ್ರಣ (ಕೋಟ್ಪಾ–2003) ಕಾರ್ಯಕ್ರಮವನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಬೇಕು. ಈ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಸಹಕಾರ ಪಡೆದು ತಂಬಾಕು ಮುಕ್ತ ಶಾಲೆ, ತಂಬಾಕು ಮುಕ್ತ ಗ್ರಾಮಗಳನ್ನು ಗುರುತಿಸಬೇಕು. ಇದರಿಂದ ಬೇರೆ ಬೇರೆ ಹಳ್ಳಿಗಳಿಗೂ ಸ್ಪೂರ್ತಿ ಹಾಗೂ ಪ್ರೇರಣೆಯಾಗಲಿದ್ದು, ಆರೋಗ್ಯವಂತ ಸಮಾಜ ನಿರ್ಮಾಣವಾಗಲು ಸಾರ್ಥಯವಾಗಲಿದೆ ಎಂದು ಹೇಳಿದರು.ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಬಿ.ಎಂ. ಪ್ರಭುದೇವ್ ಮಾತನಾಡಿ, ಜಿಲ್ಲೆಯ ತಂಬಾಕು ಮುಕ್ತ ಶಾಲೆ–ಕಾಲೇಜುಗಳ ದೃಢೀಕರಣ ಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ನೀಡಬೇಕು ಎಂದು ಹೇಳಿದರು.

ತಾಲ್ಲೂಕು ಮಟ್ಟದ ತಹಶೀಲ್ದಾರ್‌ಗಳ ಅಧ್ಯಕ್ಷತೆಯಲ್ಲಿ ತಂಬಾಕು ನಿಯಂತ್ರಣ ಸಮಿತಿಯ ತನಿಖಾ ದಳದ ಸದಸ್ಯರೊಂದಿಗೆ ತ್ರೈಮಾಸಿಕ ಸಭೆ ಮತ್ತು ತಂಬಾಕು ಕಾರ್ಯಾಚರಣೆ ನಡೆಸಿ ಗುರಿ ಸಾಧಿಸಬೇಕು. ತಂಬಾಕು ವ್ಯಸನಮುಕ್ತ ಕೇಂದ್ರಕ್ಕೆ ಮನೋಶಾಸ್ತ್ರಜ್ಞರನ್ನು ನಿಯೋಜಿಸಲು ಕೋರಿದರು.

ಸಭೆಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಚಂದ್ರಶೇಖರ್ ಕಂಬಾಳಿಮಠ್, ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ ಡಾ. ಜಿ.ಪಿ.ರೇಣುಪ್ರಸಾದ್ ಮಾತನಾಡಿ, ರಾಷ್ಟ್ರೀಯ ಟಿವಿ ನಿರ್ಮೂಲನೆ ಕಾರ್ಯಕ್ರಮದಡಿ ಆಯೋಜಿಸಲಾಗಿರುವ ಅಭಿಯಾನದಲ್ಲಿ ಕ್ಷಯ ರೋಗ ಸಂಬಂಧಿತ ಮರಣವನ್ನು ಗಣನೀಯವಾಗಿ ಕಡಿಮೆ ಮಾಡುವ ಗುರಿ ಹೊಂದಲಾಗಿದೆ. 2025ರ ವೇಳೆ “ಟಿಬಿ–ಮುಕ್ತ ಭಾರತ”ವನ್ನಾಗಿಲು ರಾಷ್ಟ್ರವ್ಯಾಪ್ತಿ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಕ್ಷಯಮುಕ್ತ ನೂರು ದಿನಗಳ ಅಭಿಯಾನ ಈಗಾಗಲೇ ಕಳೆದ 2024ರ ಡಿ.07 ರಿಂದ ಪ್ರಾರಂಭವಾಗಿದ್ದು, 2025ರ ಮಾರ್ಚ್ 24 ರವರೆಗೆ ಸಮೀಕ್ಷೆ ನಡೆಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಚಿತ್ರದುರ್ಗ ಉಪವಿಭಾಗ ಪೊಲೀಸ್ ಉಪಾಧೀಕ್ಷಕ ದಿನಕರ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿ.ಓ.ಸುಧಾ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರವೀಂದ್ರ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಚಂದ್ರಶೇಖರ್ ಕಂಬಾಳಿಮಠ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಪನಿರ್ದೇಶಕ ಮಹೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಶಿಕ್ಷಣ ಇಲಾಖೆ ಉಪನಿರ್ದೇಶಕಮಂಜುನಾಥ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

## ಡಾ.ಮನಮೋಹನ್ ಸಿಂಗ್ ಶ್ರೇಷ್ಟ ಆರ್ಥಿಕ ತಜ್ಞ

» **ಚಿತ್ರದುರ್ಗ**

ಹತ್ತು ವರ್ಷಗಳ ಕಾಲ ದೇಶದ ಪ್ರಧಾನಿಯಾಗಿದ್ದ ಡಾ.ಮನಮೋಹನ್‌ಸಿಂಗ್ ಶ್ರೇಷ್ಟ ಆರ್ಥಿಕ ತಜ್ಞ, ಚಿಂತಕರಾಗಿದ್ದರು ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್.ಜಿ.ದೇವರಾಜ್ ಬಣ್ಣಿಸಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಹಾಗೂ ಕಾಲೇಜು ನಿವೃತ್ತ ಶಿಕ್ಷಕರ ಸಂಘಗಳ ಒಕ್ಕೂಟ ಜಿಲ್ಲಾ ಘಟಕ ಮತ್ತು ಮುಕ್ತ ವೇದಿಕೆ ಇವುಗಳ ಸಂಯುಕ್ತಾಶ್ರಯದಲ್ಲಿ

ಪತ್ರಕರ್ತರ ಭವನದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಮಾಜಿ ಪ್ರಧಾನಿ ದಿ. ಡಾ.ಮನಮೋಹನಸಿಂಗ್‌ರವರ ನುಡಿನ ನಮನದಲ್ಲಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಡಾ.ಮನಮೋಹನಸಿಂಗ್‌ರವರು ಭಾರತದ ಪ್ರಧಾನಿ ಎನ್ನುವುದಕ್ಕಿಂತ ಮಿಗಿಲಾಗಿ ಅವರೊಬ್ಬ ಆರ್ಥಿಕ ಸುಧಾರಕ. ಸರಳ ವ್ಯಕ್ತಿತ್ವದ ಜ್ಞಾನ ಭಂಡಾರವಾಗಿದ್ದರು. ಎಂಟು ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಅವರು ಕೇಂದ್ರದಲ್ಲಿ ಅನೇಕ ಹುದ್ದೆಗಳನ್ನು ಅಲಂಕರಿಸಿದ್ದರು. ಯು.ಜಿ.ಸಿ.ಚೇರ್ಮನ್ ಕೂಡ ಆಗಿದ್ದರು ಎಂದು ಸ್ಮರಿಸಿದರು.

ಉದ್ಯೋಗ ಖಾತ್ರಿ ಯೋಜನೆ, ಆಧಾರ್ ಕಾರ್ಡ್, ಮಾಹಿತಿ ಹಕ್ಕು ಕಾಯಿದೆ ಇವುಗಳನ್ನೆಲ್ಲಾ ಜಾರಿ ತಂದ ಸಿಂಗ್‌ರವರು ಆಹಾರ ಭದ್ರತೆಗೆ ಒತ್ತು ಕೊಟ್ಟಿದ್ದರಿಂದ ಭಾರತ ಈಗ ಬೇರೆ ದೇಶಗಳಿಗೆ ಆಹಾರ ಕಳಿಸುವಷ್ಟು ಶ್ರೀಮಂತವಾಗಿದೆ ಎಂದರು. ನುಡಿನಮನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ.ಟಿ.ಹೆಚ್.ಕೃಷ್ಣಮೂರ್ತಿ




ಮಾತನಾಡಿ ಎರಡು ಬಾರಿ ಪ್ರಧಾನಿಯಾಗಿ ದೇಶದ ಚುಕ್ಕಾಣಿ ಹಿಡಿದು ಆರ್ಥಿಕ ಪ್ರಗತಿಗೆ ಶ್ರಮಿಸಿದ ಡಾ.ಮನಮೋಹನ್‌ಸಿಂಗ್ ವಿವಿಧ ಹುದ್ದೆಗಳನ್ನು ಅಲಂಕರಿಸಿದರೂ ಎಂದಿಗೂ ಅಧಿಕಾರದ ದರ್ಪ ತೋರಲಿಲ್ಲ. ಸರಳ, ಸಜ್ಜನಿಕೆಯ ವ್ಯಕ್ತಿತ್ವ ಅವರದು. ಸಾಕಷ್ಟು ಟೀಕೆ, ಟಿಪ್ಪಣಿ, ಸವಾಲುಗಳನ್ನು ಎದುರಿಸಿದರು. ಕಮ್ಯುನಿಸ್ಟ್‌ನವರು ಕಟುವಾಗಿ ಟೀಕಿಸುತ್ತಿದ್ದರು. ಶುದ್ದ ಹಸ್ತ ರಾಜಕಾರಣಿಯಾಗಿದ್ದ ಸಿಂಗ್‌ರವರಿಗೆ ಭಾರತ ರತ್ನ ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಡಾ.ಸಿ.ಶಿವಲಿಂಗಪ್ಪ ಮೀರಾಸಾಬಿಹಳ್ಳಿ ಮಾತನಾಡುತ್ತ ನಿವೃತ್ತ ಪ್ರಾಧ್ಯಾಪಕರುಗಳು ಮಾನಸಿಕವಾಗಿ ಸುಸ್ಥಿರವಾಗಿದ್ದಾರೆಂದರೆ ಅದಕ್ಕೆ ಬಹುಮುಖ್ಯಕಾರಣಕರ್ತರುನಮ್ಮದೇಶದಮಾಜಿ ಪ್ರಧಾನಿ ಡಾ.ಮನಮೋಹನ್‌ಸಿಂಗ್‌ರವರು. ಆರ್ಥಿಕ ಆಯಾಮಗಳಲ್ಲಿ ಸಿಂಗ್‌ರವರಲ್ಲಿದ್ದ ಚಿಂತನೆ ಪ್ರಧಾನವಾಗಿತ್ತು. ಶ್ರೇಷ್ಟ ಆರ್ಥಿಕ ಚಿಂತಕ. ಸಮಾಜವಾದದ ಆರ್ಥಿಕ ಚಿಂತನೆಯನ್ನು ಮೂಲ ದ್ರವ್ಯವಾಗಿಟ್ಟುಕೊಂಡಿದ್ದರು. ಪರಿಶುದ್ದ ರಾಜಕಾರಣಿ. ಹಾಗಾಗಿ ಅವರೊಬ್ಬ ಪ್ರಧಾನಿ ಎನ್ನುವುದಕ್ಕಿಂತ ಆರ್ಥಿಕ ಜ್ಞಾನಿಯಾಗಿದ್ದರು. ಭ್ರಷ್ಟಾಚಾರದ ಸೋಂಕು ಹತ್ತಿರಕ್ಕೆ ಸುಳಿಯಲು ಬಿಡಲಿಲ್ಲ ಎಂದು ಹೇಳಿದರು.

ಪ್ರೊ.ಹೆಚ್.ಲಿಂಗಪ್ಪ ಮಾತನಾಡುತ್ತ ಬುದ್ದ, ಬಸವ, ಭೀಮ ಪ್ರಜ್ಞೆಯನ್ನು ಹೊಂದಿದ್ದ ಡಾ.ಮನಮೋಹನ್‌ಸಿಂಗ್‌ಪ್ರಧಾನಿಯಾಗಿಕೇವಲ ಒಂದು ರೂ.ವೇತನ ಪಡೆದುಕೊಳ್ಳುತ್ತಿದ್ದರು. ಆಡಂಭರದ ಜೀವನವಿಲ್ಲದೆ ಸರಳವಾಗಿ ಬದುಕಿದವರು. ಒಳ್ಳೊಳ್ಳೆ ಯೋಜನೆಗಳನ್ನು ಜಾರಿಗೆ ತಂದಿದ್ದರಿಂದ ಬಡವರು ನೆಮ್ಮದಿಯಿಂದ ಬದುಕುವಂತಾಯಿತು. ದೇಶಕ್ಕೆ ಆರ್ಥಿಕ ಭದ್ರತೆಯನ್ನು ಕೊಟ್ಟಂತ ಮೇರು ವ್ಯಕ್ತಿತ್ವ ಅವರದು. ಕೆಲವರು ಮಹಾ ಮೌನಿ ಎಂದು ಟೀಕಿಸುತ್ತಿದ್ದರು. ವಿರೋಧಿಗಳ ಟೀಕೆ ಟಿಪ್ಪಣಿಗಳಿಗೆ ಎಂದಿಗೂ ಪ್ರತಿಕ್ರಿಯಿಸಲಿಲ್ಲ ಎಂದು ಸ್ಮರಿಸಿದರು.

## ರಾಣಿ ಚನ್ನಮ್ಮ ಪ್ರತಿಮೆ ಆನಾವರಣ



» **ಚಿತ್ರದುರ್ಗ**

ಚಿತ್ರದುರ್ಗ ತಾಲ್ಲೂಕಿನ ಜಾಲಿಕಟ್ಟೆ ಗ್ರಾಮ ಬಳಿ ಭಾನುವಾರ ಕಿತ್ತೂರ ರಾಣಿ ಚನ್ನಮ್ಮ ವೃತ್ತದಲ್ಲಿ ಕಿತ್ತೂರು ರಾಣಿ ಚನ್ನಮ್ಮರವರ ಪ್ರತಿಮೆಯನ್ನು ಆನಾವರಣ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿರಶೈವ ಲಿಂಗಾಯತ ಯುವ ವೇದಿಕೆಯ ನಗರಾಧ್ಯಕ್ಷ, ಕರ್ನಾಟಕ ರಾಜ್ಯ ಭ್ರಷ್ಟಾಚಾರ ಮುಕ್ತ ಹೋರಾಟ ಸಮಿತಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವರಾಜ್ ಜಾಲಿಕಟ್ಟೆ ಚಿತ್ರದುರ್ಗ ನಗರದ ಎಸ್.ಬಿ.ಎಂ.ವೃತ್ತಕ್ಕೆ ಕಿತ್ತೂರು ರಾಣಿ ಚನ್ನಮ್ಮ ವೃತ್ತ ಎಂದು ನಾಮಕರಣ ಮಾಡಲಾಗಿದೆ ಆದರೆ ಅಲ್ಲಿ ಪ್ರತಿಮೆಯನ್ನು ಸ್ಥಾಪನೆ ಮಾಡಲು ಜಾಗದ ಸಮಸ್ಯೆ ಇದೆ ಈ ಹಿನ್ನಲೆಯಲ್ಲಿ ಹೊಳಲ್ಕರೆ ರಸ್ತೆಯ ಜಾಲಿಕಟ್ಟೆ ಗ್ರಾಮದ ಬಳಿ ಸುಮಾರು 3 ಅಡಿ ಎತ್ತರದ ಕಿತ್ತೂರು ರಾಣಿ ಚನ್ನಮ್ಮ ಪ್ರತಿಮೆಯನ್ನು ನಿರ್ಮಾಣ ಮಾಡಿ ಅದನ್ನು ಉದ್ಘಾಟನೆಯನ್ನು ಮಾಡಲಾಗಿದೆ ಮುಂದಿನ ದಿನದಲ್ಲಿ ಸುಮಾರು 10 ಅಡಿ ಎತ್ತರದ ಕಂಚಿನ ಕಿತ್ತೂರು ರಾಣಿ ಚನ್ನಮ್ಮ ಪ್ರತಿಮೆಯನ್ನು ಮುಂದಿನ 2 ವರ್ಷದಲ್ಲಿ ನಿರ್ಮಾಣ ಮಾಡಲಾಗುವುದೆಂದು ತಿಳಿಸಿದರು.ಕಿತ್ತೂರು ರಾಣಿ ಚನ್ನಮ್ಮ ರವರ ಜೀವಿತಾವಧಿಯಲ್ಲಿ ಮಾಡಿದ ಆಡಳಿತದ ಕಾರ್ಯ ವೈಖರಿ, ಸಾಧನೆ, ಹೋರಾಟಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವನ್ನು ಮಾಡಲಾಗವುದು ಕಿತ್ತೂರು ರಾಣೀ ಚನ್ನಮ್ಮ ಜೀವನ ಚರಿತೆಯನ್ನು ತಿಳಿಸುವ ಪುಸ್ತಕವನ್ನು ಹೊರ ತರುವುದರ ಮೂಲಕ ಅದನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಮಾಡಲಾಗುವುದು ಎಂದು ತಿಳಿಸಿದರು.

## ಪ್ರಮುಖ ಸುದ್ದಿ

### ಲಿಟಲ್‌ಫ್ಲವರ್ ಆಂಗ್ಲಮಾಧ್ಯಮ ಶಾಲೆಯ ವಾರ್ಷಿಕೋತ್ಸವ

# ಶೈಕ್ಷಣಿಕ ಪ್ರಗತಿಗೆ ಹೆಚ್ಚು ಆದ್ಯತೆ ನೀಡುವ ವಿದ್ಯಾಸಂಸ್ಥೆಗಳು ವಿಶ್ವಾಸ ಗಳಿಸುತ್ತವೆ

» **ಚಳ್ಳಕೆರೆ**

ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಮಹತ್ತರ ಜವಾಬ್ದಾರಿ ಖಾಸಗಿ ಶಾಲೆಗಳ ಮೇಲೂ ಇದೆ. ಖಾಸಗಿಶಾಲೆಗಳು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ವಿಚಾರದಲ್ಲಿ ಹೆಚ್ಚು ಮುಂಜಾಗ್ರತೆ ವಹಿಸಬೇಕಿದೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಮಹತ್ತರ ಜವಾಬ್ದಾರಿ ಶಾಲಾ ಆಡಳಿತ ಮಂಡಳಿ, ಶಿಕ್ಷಕರ ಮೇಲಿದ್ದು, ಇದನ್ನು ಈಡೇರಿಸುವ ನಿಟ್ಟಿನಲ್ಲಿ ಲಿಟಲ್‌ಫ್ಲವರ್ ಆಂಗ್ಲಮಾಧ್ಯಮ ಶಾಲೆ ಯಶಸ್ವಿ ಹೆಜ್ಜೆ ಇಟ್ಟಿದೆ ಎಂಬ ವಿಶ್ವಾಸ ನನ್ನದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ ತಿಳಿಸಿದರು.

ನಗರದಒಕ್ಕಲಿಗರಹಾಸ್ಟಲ್‌ಆವರಣದಲ್ಲಿ ಲಿಟಲ್‌ಫ್ಲವರ್ ಆಂಗ್ಲಮಾಧ್ಯಮ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಜ್ಯೋತಿಬೆಳಗುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕರ ನಡುವೆ ಉತ್ತಮ ಬಾಂದವ್ಯವಿದ್ದರೆ ಅಂತಹ ವಿದ್ಯಾಸಂಸ್ಥೆಗಳು ಸುಲಭವಾಗಿ ಪೋಷಕರನ್ನು ತಲುಪುತ್ತವೆ. ಖಾಸಗಿ ವಿದ್ಯಾಸಂಸ್ಥೆಗಳ ಅಭಿವೃದ್ದಿಗೆ ಪೋಷಕರ ಸಹಕಾರ ಅತಿಮುಖ್ಯ ಎಂದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಲಿಟಲ್‌ಫ್ಲವರ್ ವಿದ್ಯಾಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ, ಡಾ.ಕೆ.ವೆಂಕಟಗಿರಿ, ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡುವುದು ಸುಲಭದ ಕೆಲಸವಾದರೂ ಅದರ ಅಭಿವೃದ್ದಿಗಾಗಿ ಶ್ರಮಿಸುವುದು ಪ್ರಸ್ತುತ ದಿನಗಳಲ್ಲಿ ಸವಾಲಾಗಿ ಪರಿಣಮಿಸಿದೆ. ಭಗವಂತನ ಕೃಪೆ ಹಾಗೂ ಎಲ್ಲರ ಸಹಕಾರದಿಂದ ನಮ್ಮ ವಿದ್ಯಾಸಂಸ್ಥೆ ಈ ಭಾಗದ ಜನರ ಮೆಚ್ಚಿನ ಸಂಸ್ಥೆಯಾಗಿ ರೂಪುಗೊಂಡಿದೆ ಎಂದು ತಿಳಿಸಿದರು.

ಪ್ರತಿವರ್ಷವೂ ನಿರೀಕ್ಷಿತಮಟ್ಟದಲ್ಲೇ ಶಾಲೆಗೆ ದಾಖಲಾತಿ ನಡೆಯುತ್ತಿವೆ. ಪ್ರತಿಯೊಂದು ಹಂತದಲ್ಲೂ ಎಲ್ಲರಿಂದಲೂ ಉತ್ತಮ ಸಹಕಾರವನ್ನು ಪಡೆಯುತ್ತಾ ಬಂದಿದ್ದೇವೆ, ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಗೆ ನಿರಂತರವಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಆದ್ಯತೆಯನ್ನು ತಾಂತ್ರಿಕತೆ ಮತ್ತು ಇನ್ನಿತರ ವಿಚಾರಗಳಿಗೆ ನೀಡಲು ನಿರ್ಧರಿಸಲಾಗಿದೆ. ಸಂಸ್ಥೆಯ ಅಭಿವೃದ್ದಿಯಲ್ಲಿ ಕೈಜೋಡಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ.

ವಿಶೇಷವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಸಚಿವರಾದ ಡಿ.ಸುಧಾಕರ್, ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ಸೇರಿದಂತೆ ಎಲ್ಲರನ್ನೂ ಅಭಿನಂದಿಸುವುದಾಗಿ ತಿಳಿಸಿದರು.

ಶಾಸಕ ಟಿ.ರಘುಮೂರ್ತಿ ಮಾತನಾಡಿ, ಚಳ್ಳಕೆರೆ ನಗರ ಪ್ರಗತಿಪರ ಖಾಸಗಿವಿದ್ಯಾಸಂಸ್ಥೆಗಳಲ್ಲಿ ಈಶಾಲೆಯೂ ಒಂದು ಎಂಬ ಹೆಮ್ಮೆ ನನಗಿದೆ. ಕಳೆದ ಹಲವಾರು ವರ್ಷಗಳಿಂದ ಶಾಲೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದಿದ್ದೇನೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಶಾಲೆಯಲ್ಲಿದ್ದು, ಯಾವುದೇ ಸಮಸ್ಯೆತಲೆದೋರದಂತೆ ವಿದ್ಯಾಸಂಸ್ಥೆ ಕಾರ್ಯನಿರ್ವಹಿಸುತ್ತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಹೆಚ್ಚು ಗಮನ ನೀಡುತ್ತಿದೆ. ಪ್ರತಿವರ್ಷವೂ ಉತ್ತಮ ಫಲಿತಾಂಶವನ್ನು ಈ ಶಾಲೆ ಪಡೆಯುತ್ತಾ ಬಂದಿದೆ. ಗ್ರಾಮೀಣ ಭಾಗದ ಬಡ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಬೇಕು ಎಂದರು.

ಆರೋಗ್ಯ ಇಲಾಖೆಯ ಮುಖ್ಯಸ್ಥ ಡಾ.ಯು.ಟಿ.ಇಫ್ತೀಕರ್ ಆಲಿ, ಕೆಂಪೇಗೌಡ ಆಡಳಿತಮಂಡಳಿಯ ಡೀನ್ ಡಾ.ಬಿ.ಸಿ.ಭಗವಾನ್, ಬಿ.ಸಿ.ಶ್ರೀನಿವಾಸ್, ಕಾರ್ಯದರ್ಶಿ ರೇಖಾ, ಆಡಳಿತಮಂಡಳಿ ಸದಸ್ಯರಾದ ಸಂತೋಷ್, ಮಂಜುನಾಥರೆಡ್ಡಿ, ನಟರಾಜ್, ರಾಜೇಶ್ವರಿ, ಮುಖ್ಯ ಶಿಕ್ಷಕರಾದ ಮಮತ, ಎನ್.ಮಂಜುನಾಥ, ಶಿಕ್ಷಕರಾದ ರಾಧ, ಹನುಮಂತರಾಯ, ಇಶ್ರತ್, ಕಮಲ, ಲಕ್ಷ್ಮಿ, ಭಾರತಿ, ಲಲಿತ ಮುಂತಾದವರು ಪಾಲ್ಗೊಂಡಿದ್ದರು.

## ಫಾಸ್ಟ್ ನ್ಯೂಸ್

### ಯುವಜನೋತ್ಸವ, ವಿಜೇತರ ವಿವರ

» ದಾವಣಗೆರೆ

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ದಾವಣಗೆರೆಯಲ್ಲಿ ಜನವರಿ 5 ಮತ್ತು 6 ರಂದು ನಡೆದ ರಾಜ್ಯ ಮಟ್ಟದ ಯುವಜನೋತ್ಸವ ಸ್ಪರ್ಧೆಗಳ ವಿಜೇತರ ವಿವರ ಪ್ರಕಟಿಸಲಾಗಿದೆ. ಘೋಷಣೆ ಸ್ಪರ್ಧೆಯಲ್ಲಿ; ಬೆಂಗಳೂರು ನಗರ ಜಿಲ್ಲೆಯ ಚಂದನ್ ಎಂ ನಾಯ್ಕ ಪ್ರಥಮ ಸ್ಥಾನ, ಚಿಕ್ಕಮಂಗಳೂರಿನ ವರುಣ್ ಡಿ. ಆರ್ಯ ದ್ವಿತೀಯ ಸ್ಥಾನ, ಹಾಸನದ ದೇಶರಾಜ್ ಪರಿಪೂರ್ಣ ತೃತೀಯ ಸ್ಥಾನ ಪಡೆದಿರುತ್ತಾರೆ.

- **ಕವನ ರಚನಾ ಸ್ಪರ್ಧೆ;** ಬೆಳಗಾವಿಯ ಶಾಂಭವಿ ಕುಶಪ್ಪ ತೇರ್ಲಿ ಪ್ರಥಮ ಸ್ಥಾನ, ಹಾಸನದ ಶೃತಿ ಎಸ್ ರಾಜ್ ದ್ವಿತೀಯ ಸ್ಥಾನ, ಉತ್ತರ ಕನ್ನಡದ ಅಸ್‌ಪಿಯಾ ಇರ್ಶಾದ್ ಅಹಮದ್ ಶೇಕ್ ತೃತೀಯ ಸ್ಥಾನ,
- **ಚಿತ್ರಕಲಾ ಸ್ಪರ್ಧೆ;** ಗದಗ ವಿನುತ ಎನ್. ಅಕ್ಕಸಾಲಿಗ ಪ್ರಥಮ ಸ್ಥಾನ, ದಾವಣಗೆರೆಯ ಕಾರ್ತಿಕ್ ಆಲೂರು ದ್ವಿತೀಯ ಸ್ಥಾನ, ಉತ್ತರ ಕನ್ನಡದ ಪ್ರಶಾಂತ ಬಾರುಗೌಡ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.
- **ಕಥೆ ಬರೆಯುವ ಸ್ಪರ್ಧೆ:** ಹಾಸನದ ತೀರ್ಥ ಪೂವಯ್ಯ ಪ್ರಥಮ ಸ್ಥಾನ, ಚಿಕ್ಕಮಂಗಳೂರಿನ ಗಗನ್ ಎಸ್ ದ್ವಿತೀಯ ಸ್ಥಾನ, ರಾಮನಗರದ ರವಿಕುಮಾರ್ ಜಿ.ಕೆ. ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.
- **ವಿಜ್ಞಾನ ವಸ್ತು ಪ್ರದರ್ಶನ:** ಬಳ್ಳಾರಿಯ ಹರ್ಷ.ಜಿ.ಎನ್ ಮತ್ತು ತಂಡದವರು ಪ್ರಥಮ ಸ್ಥಾನ, ಮಡಿಕೇರಿ ಶ್ವೇತಾನ್.ಜಿ.ರಾಯ್ ದ್ವಿತೀಯ ಸ್ಥಾನ, ದಾವಣಗೆರೆಯ ಜೀವನ.ವಿ.ಜೆ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.
- **ಜನಪದ ಗೀತೆ ಸ್ಪರ್ಧೆ:** ಮಂಡ್ಯ ಪ್ರಥಮ ಸ್ಥಾನ, ಬಾಗಲಕೋಟೆ ದ್ವಿತೀಯ ಸ್ಥಾನ, ಚಾಮರಾಜನಗರ ತೃತೀಯ ಸ್ಥಾನವನ್ನು ಪಡೆದಿದೆ.
- **ಜಾನಪದ ನೃತ್ಯ ಸ್ಪರ್ಧೆ;** ಮಂಡ್ಯ ಪ್ರಥಮ ಸ್ಥಾನ, ಉಡುಪಿ ದ್ವಿತೀಯ ಸ್ಥಾನ ಹಾಗೂ ಬಾಗಲಕೋಟೆ ತೃತೀಯ ಸ್ಥಾನವನ್ನು ಪಡೆದಿದೆ.

ಬಿಐಇಟಿ ಎಸ್.ಎಸ್.ಎಂ. ಸಾಂಸ್ಕೃತಿಕ ಭವನದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

### ಸಂಪನ್ನಗೊಂಡ ಜಾನಪದ ನೃತ್ಯ ಸ್ಪರ್ಧೆ, 29 ಜಿಲ್ಲೆಯ ಕಲಾವಿದರಿಂದ ವಿವಿಧ ಜಾನಪದ ನೃತ್ಯ ಪ್ರದರ್ಶನ

» ದಾವಣಗೆರೆ

ರಾಜ್ಯ ಮಟ್ಟದ ಯುವಜನೋತ್ಸವ ಅಂಗವಾಗಿ ದಾವಣಗೆರೆ ಬಿ.ಐ.ಇ.ಟಿ ಕಾಲೇಜಿನ ಎಸ್.ಎಸ್.ಎಂ ಸಾಂಸ್ಕೃತಿಕ ಸಭಾಂಗಣದಲ್ಲಿ ಎರಡು ದಿನಗಳ ಏರ್ಪಡಿಸಲಾದ ಜಾನಪದ ನೃತ್ಯ ಸ್ಪರ್ಧೆ ಸಂಪನ್ನಗೊಂಡಿದೆ. ರಾಜ್ಯದ 29 ಜಿಲ್ಲೆಯಿಂದ ಆಗಮಿಸಿದ ತಂಡಗಳು ಭಾಗವಹಿಸಿ ನೃತ್ಯ ಕಲೆ ಪ್ರದರ್ಶಿಸಿದರು. ಸೋಮವಾರದ ಸ್ಪರ್ಧೆಯಲ್ಲಿ ಚಿಕ್ಕಮಗಳೂರು, ಬೆಂಗಳೂರು ನಗರ, ಬಾಗಲಕೋಟೆ, ಚಿತ್ರದುರ್ಗ ಸೇರಿದಂತೆ ಹಲವು ಜಿಲ್ಲೆಗಳ ತಂಡಗಳು ಭಾಗವಹಿಸಿದ್ದವು. ಡೊಳ್ಳು ಕುಣಿತ: ನಡುವಿಗೆ ಕಂಬಳಿ ಸುತ್ತಿ, ಹುಲಿ ಪಟ್ಟೆ ವಸ್ತ್ರ ಮೇಲಂಗಿಯಾಗಿ ಧರಿಸಿ, ಇಲಕಲ್ ಕಣ ತಲೆ ಪಗಡಿಯಾಗಿ ಸುತ್ತಿ, ಬಲಗೈಯಲ್ಲಿ ಮರದ ದಾಂಡು ಹಾಗೂ ಎಡಗೈ ಬಳಸಿ ಡೊಳ್ಳು ಭಾರಿಸುತ್ತಾ, ವೇದಿಕೆ ತುಂಬೆಲ್ಲಾ ಬಂಡಾರ ಪೂಸುತ್ತಾ, ವೀರಾವೇಶದಿಂದ ಬೆಂಗಳೂರು ನಗರದ ಯುವ ಕಲಾವಿದರು, ಬೀರ ದೇವರ ಸ್ಮರಿಸಿ ನಾಡಿನ ಹೆಮ್ಮೆಯ ಡೊಳ್ಳು ನೃತ್ಯವನ್ನು ಪ್ರದರ್ಶಿಸಿದರು. ಚಿತ್ರದುರ್ಗ ಜಿಲ್ಲೆಯಿಂದ ಆಗಮಿಸಿದ ತಂಡವು ಸಹ ಡೊಳ್ಳು ಕುಣಿತ ಪ್ರದರ್ಶಿಸಿ ನೋಡುಗರ ಹೃದಯದಲ್ಲಿ ಡೊಳ್ಳಿನ ಡುಮುಖ ಧ್ವನಿ ಮೂಡಿಸಿದರು.ವೇದಿಕೆ ಮೇಲೆ ಜಾತ್ರೆ ಕಳೆ ತಂದ ಮೆರವಣಿಗೆ ಕುಣಿತ: ಬಾಗಲಕೋಟೆ ತಂಡ ಪ್ರದರ್ಶಿಸಿದ ಕರಗ(ಮೆರವಣಿಗೆ) ಕುಣಿತ ವೇದಿಕೆ ಮೇಲೆ ಜಾತ್ರೆ ಕಳೆ ತಂದಿತು. ತಮಟೆ ಧ್ವನಿಗೆ ಕೇಸರಿ ಅಂಗಿ, ಬಿಳಿಯ ಕಚ್ಚೇ ಪಂಚೆ ತೊಟ್ಟು, ಕೊರಳಿಗೆ ಹೂವಿನ ಹಾರ ಧರಿಸಿ, ತಲೆಯ ಮೇಲೆ ರಥದ ಕಳಸವನ್ನು ಪ್ರತಿನಿಧಿಸುವ ತಾಮ್ರದ ಕೊಡಗಳನ್ನು ಹೊತ್ತು ಅತ್ಯಂತ ನಾಜೂಕಾಗಿ ನೃತ್ಯವನ್ನು ಬಾಗಲಕೋಟೆ ತಂಡ ಪ್ರದರ್ಶಿಸಿತು. ಈ ನೃತ್ಯಕ್ಕೆ ಕೀಲು ಕುದುರೆ ಹಾಗೂ ಮರಗಾಲು ನೃತ್ಯ ಜೊತೆಗೂಡಿ ಸಂಪೂರ್ಣ ಗ್ರಾಮೀಣ ಜಾತ್ರೆಯ ಅನುಭವವನ್ನು ನೋಡುಗರಿಗೆ ಒದಗಿಸಿತು. ಜ.5 ರಂದು ನಡೆದ ಸ್ಪರ್ಧೆಯಲ್ಲಿ ಧಾರವಾಡ ಹಾಲಕ್ಕಿ, ಉಡುಪಿ ಕಂಗೀಲು, ಬೆಂಗಳೂರು ಗ್ರಾಮಾಂತರ ಮಾರಿ ಕುಣಿತ(ಕರಗ), ಕೋಲಾರ ಕೋಳಿ ಪಂದ್ಯ, ಬೀದರ್ ಲಂಬಾಣಿ, ಶಿವಮೊಗ್ಗ ಪೂಜಾ ಕುಣಿತ, ಮೈಸೂರು ಮಲೆಮಹದೇಶ್ವರ ನೃತ್ಯ, ಗದಗ ಸುಗ್ಗಿ, ತುಮಕೂರು ಹಾಗೂ ದಾವಣಗೆರೆ ಕಂಸಾಳೆ, ಮಂಡ್ಯ ಹಾಗೂ ಹಾಸನ ಡೊಳ್ಳು, ಕಲಬುರ್ಗಿ ಯಲ್ಲಮ್ಮನ ನೃತ್ಯ, ಯಾದಗಿರಿ ಹಲಿಗೆ, ಚಿಕ್ಕಮಗಳೂರು ವೀರಗಾಸೆ, ಕೊಪ್ಪಳ ಹಾಗೂ ಚಾಮರಾಜನಗರ ಜಿಲ್ಲೆ ತಂಡಗಳು ಜಾನಪದ ಹಾಡಿಗೆ ನೃತ್ಯ ಪ್ರದರ್ಶಿಸಿದವು.

#### ಇಂದಿರಾಕಾಂಪ್ಲೆಕ್ಸ್ ಸೇರಿದಂತೆ ನಗರಸಭೆ ಮಳಿಗೆ ಬಾಡಿಗೆದಾರರಿಗೆ ಹೊಸವರ್ಷ ಆರಂಭದಲ್ಲೇ ಹೊಡೆತಕೊಟ್ಟ ನಗರಸಭೆ ಆಡಳಿತ

# ನಗರದ ಮಳಿಗೆಗಳ ತೆರವಿಗೆ ಪೌರಾಯುಕ್ತರ ಆದೇಶ

» ಚಳ್ಳಕೆರೆ



ನಗರಸಭೆ ಆಡಳಿತ ಲೋಕೋಪಯೋಗಿ ಇಲಾಖೆ ವರದಿಯಂತೆ 94 ಮಳಿಗೆಗಳ ಬಾಡಿಗೆದಾರರಿಗೆ ಅಚಿತ ನೋಟಿಸ್ ನೀಡಿದ ಹಿನ್ನೆಲೆಯಲ್ಲಿ ನೋಟಿಸ್ ಪಡೆದ ಎಲ್ಲಾ ಬಾಡಿಗೆದಾರರು ತಮ್ಮ ವ್ಯವಹಾರಗಳನ್ನು ಮುಂದುವರೆಸಲು ಅನುಕೂಲವಾಗುವಂತೆ ಮತ್ತೊಮ್ಮೆ ಉಚ್ಚನ್ಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿ ನಗರಸಭೆ ಆದೇಶಕ್ಕೆ ತಡೆನೀಡುವಂತೆ ಈಗಾಗಲೇ ಮನವಿ ಮಾಡಿದ್ದಾರೆ. ಬಾಡಿಗೆದಾರರು ಮತ್ತು ನಗರಸಭೆಯ ನಡುವೆ ಈಗಾಗಲೇ ಖಲ್ಲಾಪಡಿಸುವ ನಿಟ್ಟಿನಲ್ಲಿ ಜಟಾಪಟಿ ಆರಂಭವಾಗಿದ್ದು ಹೈಕೋರ್ಟ್ ಆದೇಶವನ್ನು ಎದುರು ನೋಡಲಾಗುತ್ತಿದೆ.

ಬಹಳವರ್ಷಗಳನಂತರನಗರಸಭೆಆಡಳಿತ ನಗರಸಭೆ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳನ್ನು ಲೋಕೋಪಯೋಗಿ ಇಲಾಖೆಯ ವರದಿಯಂತೆ ಎಲ್ಲಾ ಮಳಿಗೆಗಳನ್ನು ನೆಲಸಮಮಾಡಿ ನೂತನ ವಾಣಿಜ್ಯ ಮಳಿಗೆ ನಿರ್ಮಾಣ ಮಾಡುವ ಯೋಜನೆಯನ್ನು ಜಾರಿಗೊಳಿಸಲು ಸಿದ್ದತೆ ನಡೆಸಿದೆ ಎಂದು ಪೌರಾಯುಕ್ತ ಎಚ್.ಜಿ.ಜಗರೆಡ್ಡಿ ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಅವರು, ಕಳೆದ ಹಲವಾರು ವರ್ಷಗಳಿಂದ ನಗರಸಭೆ ಸಭೆ ಹಾಗೂ ಆಯುವ್ಯಯದ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರು ನಗರಸಭೆ ವಾಣಿಜ್ಯಮಳಿಗೆಗಳ ದುರಸ್ಥಿ ಕುರಿತು ನಗರಸಭೆ ಆಡಳಿತಕ್ಕೆ ಹಲವಾರು ಬಾರಿ ಪ್ರಶ್ನೆ ಮಾಡಿದ್ದಾರೆ. ಬಹುತೇಕಮಹಿಳೆಗಳು ಶಿಥಿಲ ವ್ಯವಸ್ಥೆ ತಲುಪಿದ್ದು, ಯಾವುದೇ ಸಂದರ್ಭದಲ್ಲೂ ಕುಸಿದು ಪ್ರಾಣಕ್ಕೆ ಅಪಾಯವಾಗುವ ಪರಿಸ್ಥಿತಿ ಇದೆ ಎಂದು ಲೋಕೋಪಯೋಗಿ ಇಲಾಖೆ ವರದಿ ನೀಡಿದೆ. ಈ ಹಿನ್ನೆಲೆಯಲ್ಲಿ ನಗರಸಭೆ ಆಡಳಿತ ಮತ್ತೊಮ್ಮೆ ಕ್ಷೇತ್ರದ ಶಾಸಕ ಟಿ.ರಘುಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಮಳಿಗೆಗಳನ್ನು ನೆಲಸಮ ಮಾಡಿದ ನಂತರ ಅದೇ ಜಾಗದಲ್ಲಿ ಬಹುಕೋಟಿ ವೆಚ್ಚದಲ್ಲಿ ಸುಸಜ್ಜಿತ ಮಲ್ಟಿಕಾಂಪ್ಲೆಕ್ಸ್ ಕಟ್ಟಡವನ್ನು ಕಟ್ಟುವ ಉದ್ದೇಶವನ್ನು ಹೊಂದಿದೆ.

ಚಳ್ಳಕೆರೆ ನಗರಸಭೆ ವ್ಯಾಪ್ತಿಯ ಇಂದಿರಾಶಾಪಿಂಗ್ ಕಾಂಪ್ಲೆಕ್ಸ್‌ನ 51, ಮಹದೇವಿ ರಸ್ತೆ 31, ಪಾವಗಡ ರಸ್ತೆಯ 8, ಚಿತ್ರದುರ್ಗ ರಸ್ತೆಯ 4 ಒಟ್ಟು 94 ಮಳಿಗೆಗಳಿದ್ದು ಈಗಾಗಲೇ ಅಪಾಯದ ಸ್ಥಿತಿ ತಲುಪಿದ್ದರೂ ಸಹ ಬಾಡಿಗೆದಾರರು ನಗರಸಭೆಯ ನಿಯಮಗಳನ್ನು ಉಲ್ಲಂಘಿಸಿ ಪ್ರಸ್ತುತಮಳಿಗೆಯಲ್ಲೇತಮ್ಮವ್ಯವಹಾರವನ್ನು ಮುಂದುವರೆಸಿದ್ದಾರೆ. ಇದರಿಂದ ಯಾವುದೇ ಸಂದರ್ಭದಲ್ಲಾದರೂ ಮಳಿಗೆಗಳು ಕುಸಿದು ಬೀಳಬಹುದು ಎಂಬ ಲೋಕೋಪಯೋಗಿ ಇಲಾಖೆ ಆದೇಶದ ಹಿನ್ನೆಲೆಯಲ್ಲಿ ನಗರಸಭೆ ಆಡಳಿತ ಎಲ್ಲಾ ಬಾಡಿಗೆದಾರರಿಗೆ ಲಿಖಿತವಾಗಿ ನೋಟಿಸ್ ಜಾರಿ ಮಾಡಿ ಕೂಡಲೇ ಮಳಿಗೆ ತೆರವುಗೊಳಿಸುವಂತೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

ಪೌರಾಯುಕ್ತರು ಆದೇಶ ನೀಡಿದ ಬೆನ್ನಹಿಂದೆಯೇ ಮುಂದಿನ ದಿನಗಳಲ್ಲಿ ಮಲ್ಟಿಕಾಂಪ್ಲೆಕ್ಸ್ ಕಾಮಗಾರಿ ವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಕೆವಿಟ್ ಸಹ ಸಲ್ಲಿಸಿದ್ದಾರೆ. ಇದರಿಂದ ನಗರಸಭೆ ಆಡಳಿತ ಮಳಿಗೆಗಳನ್ನು ಖಲ್ಲಾ ಪಡಿಸುವ ನಿಟ್ಟಿನಲ್ಲಿ ದಿಟ್ಟಹೆಜ್ಜೆ ಇಟ್ಟಾಂತಾಗಿದೆ. ಸಾರ್ವಜನಿಕವಾಗಿಯೂ ನಗರಸಭೆ ಈ ಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತವಾಗಿದ್ದು, ಶಿಥಿಲಗೊಂಡ ಮಳಿಗೆಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಕಡಿಮೆ ಬಾಡಿಗೆ ಪಾವತಿಸುವ ಮೂಲಕ ನಗರಸಭೆ ಆದಾಯಕ್ಕೆ ಕುತ್ತುತರಲಾಗಿದೆ ಎಂಬ ಭಾವನೆ ಸಾರ್ವಜನಿಕರಲ್ಲಿದೆ. ಲೋಕೋಪಯೋಗಿ ಇಲಾಖೆಯ ಸೂಚನೆಯಂತೆ ನಗರಸಭೆ ಆಡಳಿತ ಪ್ರತಿಯೊಂದು ಮಳಿಗೆ ಮೇಲೆಯೂ ಉಪಯೋಗಕ್ಕೆ ಯೋಗ್ಯವಲ್ಲವೆಂಬ ಸೂಚನೆಯನ್ನು ಪ್ರತಿಮಳಿಗೆ ಮೇಲೆ ಬರೆಸಲಾಗಿದೆ. ನಗರಸಭೆ ದಿಢೀರ್ ನಿರ್ಧಾರ 94 ಮಳಿಗೆಗಳ ಬಾಡಿಗೆದಾರರಿಗೆ ಗಾಬರಿಯನ್ನುಂಟು ಮಾಡಿದೆ. ಈಗಾಗಲೇ ನಗರಸಭೆ ಆಯುಕ್ತರಿಂದ ಬಾಡಿಗೆದಾರರಿಗೆ ನೋಟಿಸ್ ಸಹ ಜಾರಿಯಾಗಿದ್ದು, ನೋಟಿಸ್ ಸ್ವೀಕರಿಸಿದ ಕೆಲವರು ಮತ್ತೊಮ್ಮೆ ನ್ಯಾಯಾಲಯದ ಮೊರೆಹೊಗಲು ಸಿದ್ದರಾಗಿದ್ದಾರೆ. ನಗರದ ಪ್ರಮುಖ ವೃತ್ತವಾದ ನೆಹರೂ ವೃತ್ತದಲ್ಲೇ ಇಂದಿರಾಶಾಪಿಂಗ್ ಕಾಂಪ್ಲೆಕ್ಸ್ ಕಳೆದ ಸುಮಾರು 40 ವರ್ಷಗಳ ಹಿಂದೆ ನಿರ್ಮಾಣವಾಗಿದೆ. ಅಂದಿನಿಂದಲೂ ಈ ಕಟ್ಟಡದಲ್ಲಿ ಇರುವ ಬಾಡಿಗೆದಾರರು ತಮ್ಮ ವ್ಯವಹಾರವನ್ನು ಮುಂದುವರೆಸಿದ್ದು, ಯಾರೂ ಸಹ ಮಳಿಗೆಗಳನ್ನು ಖಾಲಿ ಮಾಡಲು ಸಿದ್ದರಿಲ್ಲ. ಆದರೂ ಸಹ ನಗರಸಭೆ ಆಡಳಿತ ಈ ಬಾರಿ ಮಳಿಗಳನ್ನು ತೆರವುಗೊಳಿಸಿ ಕಾಮಗಾರಿ ಆರಂಭಿಸಲು ಯೋಜನೆಯನ್ನು ಸಿದ್ದಪಡಿಸಿಕೊಂಡಿದೆ.ಮಲ್ಟಿಕಾಂಪ್ಲೆಕ್ಸ್‌ನಿರ್ಮಾಣದಿಂದ ವಾಹನ ನಿಲುಗಡೆ ಸೇರಿದಂತೆ ಇನ್ನೂ ಹೆಚ್ಚುವರಿಯಾಗಿ ಮಳಿಗೆಗಳು ನಿರ್ಮಾಣವಾಗಲಿದ್ದು ಹೆಚ್ಚಿನ ಸಂಖ್ಯೆಯ ವಾಣಿಜ್ಯೋದ್ಯಮಿಗಳು ಇದರ ಸದುಪಯೋಗ ಪಡೆದುಕೊಳ್ಳುವ ಅವಕಾಶವಿದೆ.

## ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣ ನೀಡಬೇಕೆ ವಿನಃ ಹಣ ದೋಚುವ ಕೇಂದ್ರಗಳಾಗಬಾರದು: ಪೋತೆ

» ಚಿತ್ರದುರ್ಗ



ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ನೀಡಬೇಕೆ ವಿನಃ ಹಣ ದೋಚುವ ಕೇಂದ್ರಗಳಾಗಬಾರದೆಂದು ಚಳ್ಳಕೆರೆಯ ಕೋಟೆ ಬೋರಮ್ಮ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಸಂಜೀವಕುಮಾರ್ ಪೋತೆ ಹೇಳಿದರು.

ತ.ರಾ.ಸು.ರಂಗಮಂದಿರದಲ್ಲಿ ಭಾನುವಾರ ನಡೆದ ಸೋಮೇಶ್ವರ ಪಬ್ಲಿಕ್ ಸ್ಕೂಲ್‌ನ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಕೇವಲ ಅಕ್ಷರ ಬೋಧನೆಯಾಗಬಾರದು. ಸಾಮಾಜಿಕ ಪರಿವರ್ತನೆಗೆ ಕಾರಣವಾಗಬೇಕು. ವರ್ತಮಾನದ ಜೊತೆಗೆ ಮುಖಾಮುಖಿಯಾಗುವುದರೊಂದಿಗೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶಿಕ್ಷಣವಿರಬೇಕು. ದೂರದೃಷ್ಟಿ ಮತ್ತು ಸಾಮಾಜಿಕ ಪರಿವರ್ತನೆಗೆ ಶಿಕ್ಷಣವನ್ನು ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳ ಅಕ್ಷರ ಜ್ಞಾನಕ್ಕೆ ಮತ್ತು ವಿಸ್ತಾರದ ಕಲಿಕೆಗೆ ಶಿಕ್ಷಕರುಗಳು ಹೆಚ್ಚಿನ ಒತ್ತು ಕೊಡಬೇಕೆಂದು ಸಲಹೆ ನೀಡಿದರು.

ಪ್ರತಿ ಮಕ್ಕಳಲ್ಲಿಯೂ ಒಂದಲ್ಲ ಒಂದು ರೀತಿಯ ಪ್ರತಿಭೆಯಿರುತ್ತದೆ. ಅವುಗಳನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಶಿಕ್ಷಕರು ಮತ್ತು ಪೋಷಕರುಗಳ ಪಾತ್ರ ಮುಖ್ಯ. ಮಕ್ಕಳನ್ನು ಕೇವಲ ಅಂಕಗಳಿಗಷ್ಟೆ ಸೀಮಿತಗೊಳಿಸುವುದು ಸರಿಯಲ್ಲ. ಪಠ್ಯದ ಜೊತೆಗೆ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಮಕ್ಕಳು ತೊಡಗಿಕೊಳ್ಳಲು ಅವಕಾಶ ಕಲ್ಪಿಸಬೇಕು. ಮಕ್ಕಳ ಕಲ್ಪನಾ ಭಾವನಾತ್ಮಕ ಶಕ್ತಿಯನ್ನು ಶೈಕ್ಷಣಿಕ ಮತ್ತು ಪಠ್ಯಕ್ರಮಗಳ ಶಿಸ್ತಿನೊಳಗೆ ಬಂಧಿಸಿ ನೈತಿಕ ಮೌಲ್ಯಗಳ ಬದಲಾಗಿ ಸೇವೆಯನ್ನೇ ಒಪ್ಪಿಕೊಳ್ಳುವುದನ್ನು ಕಲಿಸುತ್ತಿದ್ದೇವೆ. ಶಿಕ್ಷಣದ ಹೆಸರಿನಲ್ಲಿ ಮಕ್ಕಳ ಬದುಕನ್ನು ಸಾಂಸ್ಥಿಕರಣಗೊಳಿಸಿ ಸಂಬಂಧಗಳನ್ನು ಕೊಲ್ಲುತ್ತಿದ್ದೇವೆಂದು ವಿಷಾಧಿಸಿದರು.ಶಿಕ್ಷಕರು ವಿದ್ಯಾರ್ಥಿಗಳ ಬಯೋಡೇಟಾ ರೂಪಿಸುವ ಕಲಾವಿದರಾಗುವ ಬದಲು ತನ್ನ ಭವಿಷ್ಯವನ್ನು ತಾನೆ ರೂಪಿಸಿಕೊಳ್ಳುವ ಕೌಶಲ್ಯ ಶಿಕ್ಷಣವನ್ನು ನೀಡಬೇಕು. ಆಗ ಮಾತ್ರ ಗುರುಗಳಿಗೆ ಪರಿಪೂರ್ಣವಾದ ಅರ್ಥ ಸಿಗುತ್ತದೆ. ಶಿಕ್ಷಣದ ಮೂಲ ಉದ್ದೇಶ ಬಹುದೂರ ಸಾಗಿ ಶಿಕ್ಷಣ ಸಂಸ್ಥೆಗಳು ಹಣ ಗಳಿಸುವುದನ್ನೇ ಉದ್ದೇಶವನ್ನಾಗಿಟ್ಟುಕೊಂಡಿವೆ. ನೈತಿಕ ಮೌಲ್ಯಗಳು ಮಾಯವಾಗುತ್ತಿದ್ದು, ಶುದ್ದೀಕರಿಸುವ ಕೆಲಸವಾಗಬೇಕೆಂದರು.

ಸೋಮೇಶ್ವರ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷೆ ಸುಜಾತ ರಾಜು ಅಧ್ಯಕ್ಷತೆ ವಹಿಸಿದ್ದರು. ಐ. ಮಾಸ್ಟರ್ ಸಂಸ್ಥೆ ನಿರ್ದೇಶಕ ದಾವಣಗೆರೆಯ ವೀರೇಶ್ ಎಂ. ನಂದಿನಿ ವಿದ್ಯಾಸಂಸ್ಥೆ ಮುಖ್ಯಸ್ಥ ಆಲೂರಿನ ಸುರೇಶ್ ಡಿ.ಹೆಚ್. ರೇಣುಕಾಂಬ ರೂರಲ್ ಐ.ಟಿ.ಐ.ಪ್ರಾಂಶುಪಾಲರಾದ ಸಿದ್ದೇಶ್ ಹೆಚ್.ಸಿ. ಶಿಕ್ಷಣ ಸಂಯೋಜಕ ಜಿ.ಬಿ.ರವೀಂದ್ರನಾಥ್, ಕುಮಾರ್ ಎ.ಎಂ. ಸೋಮೇಶ್ವರ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಜಿ.ಆರ್.ಪ್ರದೀಪ್‌ಮುಖ್ಯೋಪಾಧ್ಯಾಯಿನಿ ಗೀತಾ ಬಿ.ಎನ್.ವೇದಿಕೆಯಲ್ಲಿದ್ದರು.

## 13 ಕಿ.ಮೀ. ನೂತನ ಸಿ.ಸಿ.ರಸ್ತೆ ಕಾಮಗಾರಿಗೆ ಚಂದ್ರಪ್ಪ ಚಾಲನೆ



» ಹೊಳಲ್ಕೆರೆ

ಕ್ಷೇತ್ರದ ಅಭಿವೃದ್ಧಿ ಕಡೆ ರಾಜಕಾರಣಿಗಳಿಗೆ ಕಾಳಜಿಯಿರಬೇಕು. ಅಧಿಕಾರ ಶಾಶ್ವತವಲ್ಲ. ಇರುವಷ್ಟು ದಿನ ಹತ್ತಾರು ಜನಕ್ಕೆ ಒಳ್ಳೆಯ ಕೆಲಸ ಮಾಡಬೇಕೆಂಬುದು ನನ್ನ ಉದ್ದೇಶ ಎಂದು ಶಾಸಕ ಡಾ.ಎಂ.ಚಂದ್ರಪ್ಪ ಹೇಳಿದರು.ಭರಮಸಾಗರ ಹೋಬಳಿ ಹಿರೇಬೆನ್ನೂರು ಗ್ರಾಮದಲ್ಲಿ 65 ಕೋಟಿ ರೂ.ವೆಚ್ಚದಲ್ಲಿ ಹಿರೇಬೆನ್ನೂರಿನಿಂದ ಸಿರಿಗೆರೆ ಸಾಸಲುವರೆಗೆ 13 ಕಿ.ಮೀ. ನೂತನ ಸಿ.ಸಿ. ರಸ್ತೆ ಕಾಮಗಾರಿಗೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.ಭರಮಸಾಗರ ಕೆರೆ ಅಭಿವೃದ್ದಿಗೆ ಐದು ಕೋಟಿ ರೂ.ಗಳನ್ನು ನೀಡಿದ್ದೇವೆ. ಕುಡಿಯುವ ನೀರು, ವಿದ್ಯುತ್ ಸಮಸ್ಯೆ ನಿವಾರಣೆಯಾಗಿದೆ. ಉತ್ತಮ ಗುಣಮಟ್ಟದ ಸಿ.ಸಿ.ರಸ್ತೆ,

ಶಾಲಾ–ಕಾಲೇಜು, ಹೈಟೆಕ್ ಆಸ್ಪತ್ರೆಗಳನ್ನು ಕಟ್ಟಿಸಿದ್ದೇನೆ. ಸರ್ಕಾರಿ ಶಾಲೆಗೆ ಬರುವ ಬಡ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಬಾರದೆಂದು ಸ್ವಂತ ಖರ್ಚಿನಿಂದ ಬಸ್‌ಗಳ ವ್ಯವಸ್ಥೆ ಕಲ್ಪಿಸಿದ್ದೇನೆ. ಚಿಕ್ಕಜಾಜೂರಿನ ಕೋಟೆಹಾಳ್ ಬಳಿ ಐದು ನೂರು ಕೋಟಿ ರೂ.ಗಳನ್ನು ಖರ್ಚು ಮಾಡಿ ವಿದ್ಯುತ್ ಪವರ್ ಸ್ಟೇಷನ್ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಇದರಿಂದ ಇನ್ನು ನೂರು ವರ್ಷಗಳ ಕಾಲ ರೈತರಿಗೆ ವಿದ್ಯುತ್ ಸಮಸ್ಯೆಯಿರುವುದಿಲ್ಲ. ಭದ್ರಾ ಪ್ರಾಜೆಕ್ಟ್‌ನಿಂದ ಆ.15 ರೊಳಗೆ ತಾಲ್ಲೂಕಿನಾದ್ಯಂತ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲಾಗುವುದು.

## ಪ್ರಮುಖ ಸುದ್ದಿ

# ನಮ್ಮ ಸಂವಿಧಾನವನ್ನು ನಾವು ರಕ್ಷಣೆ ಮಾಡಬೇಕಿದೆ: ತಾಜ್‌ಪೀರ್

» ಚಿತ್ರದುರ್ಗ




ಸಂವಿಧಾನ ನಮಗೆ ಹುಟ್ಟುವ ಮೊದಲೇ ಹಾಗೂ ಸಾವಿನ ನಂತರಕ್ಕೂ ಸಹಾ ಸೌಲಭ್ಯವನ್ನು ನೀಡಿದೆ. ನಮ್ಮ ಸಂವಿಧಾನವನ್ನು ನಾವು ರಕ್ಷಣೆ ಮಾಡಬೇಕಿದೆ ಎಂದು ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎಂ.ಕೆ.ತಾಜ್‌ಪೀರ್ ಕರೆ ನೀಡಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಂವಿಧಾನ ರಕ್ಷ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬಿಜೆಪಿಯವರು ಅಂಬೇಡ್ಕರ್‌ರವರನ್ನು ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ಸೋಲಿಸಿತು ಎಂದು ಎಲ್ಲಡೆ ಹೇಳುತ್ತಿದ್ದಾರೆ ಆದರೆ ನಿಜವಾಗಿ ಅಂಬೇಡ್ಕರ್‌ರವರನ್ನು ಸೋಲಿಸಿದ್ದ ಕಾಂಗ್ರೆಸ್ ಅಲ್ಲ ಅವರು ಆ ಸಮಯದಲ್ಲಿ ಕಾಂಗ್ರೆಸ್ ಪಕ್ಷವನ್ನು ತೊರೆದು ಬೇರೆ ಪಕ್ಷವನ್ನು ಕಟ್ಟಿ ಅದರಿಂದ ಅವರು ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. ಈ ಸಮಯದಲ್ಲಿ ಆರ್.ಎಸ್.ಎಸ್. ಸಂಘಟನೆ ಇವರ ವಿರುದ್ದ ಅವರ ಜನಾಂಗದವರನ್ನು ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತೆ ಮಾಡಿ ಮತಗಳು ಚದುರುವಂತೆ ಮಾಡಿದ್ದರು ಎಂದರು.

ಆದರೆ ಇವರು ಚುನಾವಣೆಯಲ್ಲಿ ಸೋತ್ತಿದ್ದರು ಪಕ್ಷವನ್ನು ಬಿಟ್ಟಿದ್ದರೂ ಸಹಾ ಕಾಂಗ್ರೆಸ್ ಅವರನ್ನು ಮರಳಿ ಕರೆದುಕೊಂಡು ರಾಜ್ಯಸಭಾ ಸದಸ್ಯರನ್ನಾಗಿ ಮಾಡಿ ಕಾನೂನು ಮಂತ್ರಿಯನ್ನಾಗಿ ಮಾಡಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಇದನ್ನು ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ಜನರಿಗೆ ತಿಳಿಸುವ ಕಾರ್ಯವನ್ನು ಮಾಡಬೇಕಿದೆ ಎಂದು ತಿಳಿಸಿದರು.

ಅಮಿತಾ ಷಾ ರವರು ಅಂಬೇಡ್ಕರ್‌ರವರ ಹೆಸರನ್ನು ಸ್ಮರಣೆ ಮಾಡುವುದರ ಬದಲು ದೇವರ ಹೆಸರನ್ನು ಸ್ಮರಣೆ ಮಾಡಿದರೆ ಸ್ವರ್ಗ ಸಿಗುತ್ತದೆ ಎಂದಿದ್ದಾರೆ ಆದರೆ ಇವರಿಗೆ ಗೊತ್ತಿಲ್ಲ ಹಲವಾರು ಜನಾಂಗವನ್ನು ದೇವಸ್ಥಾನದ ಒಳಗಡೆಯೇ ಬಿಡುವುದಿಲ್ಲ ದೇವರನ್ನು ನೋಡಲು ಬಿಡದವರು ಸ್ವರ್ಗಕ್ಕೆ ಹೋಗಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿ, ಜನತೆಯ ಮನಸ್ಸಿನಲ್ಲಿ ಅಂಬೇಡ್ಕರ್ ಅಚ್ಚಳಿಯದೆ ಉಳಿದಿದ್ದಾರೆ. ಅದನ್ನು ತೆಗೆಯುವ ಕಾರ್ಯವನ್ನು ಈ ರೀತಿಯಾದ ಮಾತುಗಳಿಂದ ಅಮಿತಾ ಷಾರವರು ಮಾಡುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಕಾಂಗ್ರೆಸ್ ಪಕ್ಷ ಸಂವಿಧಾನ ರಕ್ಷ ಅಭಿಯಾನವನ್ನು ಪ್ರಾರಂಭ ಮಾಡಿದೆ ಸಂವಿಧಾನದ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನು ಆಡುತ್ತಿರುವ ಪಕ್ಷಕ್ಕೆ ಸರಿಯಾದ ಪಾಠವನ್ನು ಕಲಿಸಿ ಜನತೆಗೆ ಸಂವಿಧಾನದ ಬಗ್ಗೆ ತಿಳಿಸುವ ಕಾರ್ಯವನ್ನು ದೆಹಲಿಯಿಂದ ಹಿಡಿದು ಗ್ರಾಮ ಮಟ್ಟದವರೆಗೂ ನಡೆಸಲಾಗುವುದು ಎಂದರು.

ಸಂವಿಧಾನ ಎಲ್ಲರಿಗೂ ಎಲ್ಲಾ ಸಮುದಾಯದವರಿಗೂ ಸಹಾ ಎಲ್ಲಾ ಅರ್ಥದಲ್ಲಿಯೂ ಸೌಲಭ್ಯವನ್ನು ನೀಡಿದೆ. ಇದರಲ್ಲಿ ಮಹಿಳೆಯರಿಗೂ ಸಹಾ ವಿಶೇಷವಾದ ಸ್ಥಾನವನ್ನು ನೀಡಿದೆ.

ಸಂವಿಧಾನದ ಆಶಯದಿಂದಲೇ ಸಣ್ಣ–ಸಣ್ಣ ಸಮುದಾಯದವರು ಸಹಾ ಅಧಿಕಾರವನ್ನು ಹಿಡಿಯುವಂತೆ ಆಗಿದೆ ಎಂದು ಹೇಳಿದರು.ಜನವರಿ 26 ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು ತದ ನಂತರ ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಇದರಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಆಹ್ವಾನ ಮಾಡಿ, ಸ್ವಾತ್ರಂತ್ರ್ಯ ಹೋರಾಟಗಾರರನ್ನು ಗೌರವಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸವನ್ನು ನೀಡುವಂತೆ ಕೆಪಿಸಿಸಿ ಸೂಚನೆ ನೀಡಿದೆ ಎಂದು ತಾಜ್‌ಪೀರ್ ತಿಳಿಸಿದರು.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಗಾಂಧೀಜಿಯವರನ್ನು ದೂರವಿಟ್ಟರೆ ಮಾತ್ರ ನಮಗೆ ಉಳಿಗಾಲ ಎಂದು ಅರಿತ ಮನುವಾದಿಗಳು ಅವರನ್ನು ದೂರ ಇಡಲಾಯಿತು. ಬಿಜೆಪಿ ಸಂವಿಧಾನದ ವಿರುದ್ದ ಹೋರಾಟವನ್ನು ಮಾಡುತ್ತಿದೆ, ಅದರಿಂದಲೇ ನಾವು ಎಂಬ ಸತ್ಯವನ್ನು ಮರೆತ್ತಿದ್ದಾರೆ. ಅಂಬೇಡ್ಕರ್ ರವರು ಬರೀ ಎಸ್.ಸಿ. ಎಸ್.ಟಿ.ಯವರಿಗೆ ಮಾತ್ರ ಸಂಬಂಧ ಇಲ್ಲ ಎಲ್ಲರಿಗೂ ಸಹಾ ಸಂಬಂಧಪಟ್ಟ ವ್ಯಕ್ತಿಯಾಗಿದ್ದಾರೆ ಎಂದರು.

ಎಲ್ಲರಿಗೂ ಸಮಾನವಾದ ಬದುಕುವ ಹಕ್ಕನ್ನು ನೀಡಿದ್ದಾರೆ. ಎಲ್ಲಾ ವರ್ಗದವರ ಧ್ವನಿಯಾಗಿ ಸಂವಿಧಾನ ಇದೆ. ಅಂಬೇಡ್ಕರ್ ಒಬ್ಬ ಅಸಮಾನ್ಯವಾದ ವ್ಯಕ್ತಿಯಾಗಿದ್ದಾರೆ ಅವರು ಜನನವಾಗಿ ಸಂವಿಧಾನವನ್ನು ಬರೆಯದೆ ಇದ್ದಿದ್ದರೆ ಬಹುತೇಕ ಸಮುದಾಯಗಳು ಕಳೆದು ಹೋಗುತ್ತಿದ್ದವು, ಮೀಸಲಾತಿ ಇಲ್ಲದಿದ್ದರೆ ಅಧಿಕಾರವನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ, ಕಾಲ ಕಾಲಕ್ಕೆ ಸಂವಿಧಾನವನ್ನು ತಿದ್ದುಪಡಿ ಮಾಡುವುದರ ಮೂಲಕ ಜನತೆಗೆ ವಿವಿಧ ರೀತಿಯ ಅಧಿಕಾರವನ್ನು ನೀಡಲಾಗಿದೆ ಎಂದು ತಿಳಿಸಿದರು.

ಡಿಸಿಸಿ ಕಾರ್ಯಾಧ್ಯಕ್ಷ ಹಾಲಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಗೀತಾ ನಂದಿನಿಗೌಡ, ಎಸ್.ಎಂ.ಎಲ್ ತಿಪ್ಪೇಸ್ವಾಮಿ, ಪರಿಶಿಷ್ಟ ಪಂಗಡಗಳ ವಿಭಾಗದ ಜಿಲ್ಲಾ ಅಧ್ಯಕ್ಷ ಬಿ.ಮಂಜುನಾಥ್, ಪರಿಶಿಷ್ಟ ಜಾತಿಗಳ ವಿಭಾಗದ ಜಿಲ್ಲಾ ಅಧ್ಯಕ್ಷ ಎಸ್.ಜಯ್ಯಣ್ಣ, ಜಿಲ್ಲಾ ಅಲ್ಪಸಂಖ್ಯಾತರ ಅಧ್ಯಕ್ಷ ಸೈಯದ್ ಖುದ್ದುಸ್, ಹಿಂದುಳಿದ ವರ್ಗದ ಜಿಲ್ಲಾ ಅಧ್ಯಕ್ಷ ಎನ್.ಡಿ.ಕುಮಾರ್, ಖಾಸಿಂಆಲಿ, ಲೋಕೇಶ್, ಚೋಟು, ನಗರಸಭೆಯ ಮಾಜಿ ಅಧ್ಯಕ್ಷ ಸಿ.ಟಿ.ಕೃಷ್ಣಮೂರ್ತಿ ಇದ್ದರು.


Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T